॥धर्मो रक्षति रक्षितः॥

# HAVYAKA SANDESHA

ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XIX, No. 3 | June 2011 | Pages 12 | **Rs. 2/-**



*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Hon. Joint Editor*** : G. V. Bhagwat

***Editorial Committee*** : R. P. Hegde, R. M. Shastri, Smt. Shashikala Hegde

***Publisher*** : Narayan Akadas R. **Hon. Gen. Secretary**

***Printed at*** : M/s. Navin Printers **Mumbai - 400 016.** ✆ **2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

***President*** : N. R. Hegde, Dombivli
***Vice - President*** : Shivkumar P. Bhagwat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde, R. P. Hegde, Smt. Shashikala Hegde, R. N.Kameshwar, A. K. Bhat, Smt. Uma Swamy, M. R. Ramakrishna, Sanjay Bhat, Sathishkumar K.C.

***Co-opted Members :***

G. V. Bhagwat, Balchandra Markande, Ganesh Shanbhag, Prabhakar Bhat, Shripad Bhat

*ಸಂಪಾದಕೀಯ*

# ಆಶಾಕಿರಣ

ಬೇಸಿಗೆಯ ಧಗೆ ಏರುತ್ತಿದೆ ಎನಿಸುತ್ತಿರುವಾಗಲೇ ಬೀಸಿ ಬಂದ ತಂಗಾಳಿ ಕಂಪೌಂಡಿನಲ್ಲೆಲ್ಲೊ ಮರವನ್ನಪ್ಪಿಕೊಂಡ ಮಲ್ಲಿಗೆಯ ಬಳ್ಳಿಯಿಂದ ಪರಿಮಳವನ್ನು ಕದ್ದು ತರುತ್ತಿದೆ. ದಾರಿಯಂಚಿಗೆ ಸಾಲಾಗಿ ನಿಂತಿರುವ ಗುಲ್‌ಮೋಹರ್ ಗಿಡಗಳಿಗೆ ರಂಗೇರಿ, ಕೆಂಪು, ಹಳದಿ ಬಣ್ಣದ ಚಿತ್ತಾರ ಮನಸೆಳೆಯುತ್ತಿದೆ. ಕಣ್ಣಿಗೆಂದೂ ತೋರದಿದ್ದರೂ 'ಕುಹು ಕುಹು' ಎಂದು ಕೇಳುವ ಮಂಜುಳಗಾನ ಕೋಗಿಲೆಯೆಲ್ಲೊ ಅವಿತಿದೆ ಎನ್ನುತ್ತಿದೆ. ಗಿಡಮರಗಳ ಹೊಸ ಚಿಗುರು 'ಕಾಂಕ್ರೀಟ್ ನಾಡಿನಲ್ಲಿಯೂ ವಸಂತನಾಗಮನವಾಗಿದೆ.' ಎಂದು ನುಡಿಯುತಿದೆ.

ಇದೇ ಸಮಯದಲ್ಲಿ ದೇಶದ ಬಾನಂಗಳದಲ್ಲಿ ಕವಿದ ಕಾರ್ಮೋಡದ ನಡುವೆಯೂ ಬೆಳ್ಳಿ ಮಿಂಚು ಹೊಳೆಯುತ್ತಿದೆ. ವರ್ಷವಿಡೀ ದೇಶದ ವಿವಿಧ ಭಾಗಗಳಲ್ಲಿ ಬಿಚ್ಚುಕೊಂಡು ಬೆಚ್ಚಿ ಬೀಳಿಸುವ ಭ್ರಷ್ಟಾಚಾರದ ಹಗರಣಗಳು...ದೇಶದ ಬಡತನವನ್ನು ಸಂಪೂರ್ಣವಾಗಿ ಹೋಗಲಾಡಿಸಬಹುದಷ್ಟು ಕಪ್ಪು ಹಣ ಸ್ವಿಸ್‌ಬ್ಯಾಂಕ್‌ನಲ್ಲಿ ಕೊಳೆಯುತ್ತಿದೆ ಎನ್ನುವ ದಳ್ಳುರಿ. ಜೊತೆಯಲ್ಲಿ ನಮಗೇನು ಮಾಡಲಾಗುತ್ತಿಲ್ಲ ಎನ್ನುವಂತಹ ಅಸಹಾಯಕತೆ... ಇವೆಲ್ಲರ ನಡುವೆ ಅಣ್ಣಾ ಹಜಾರೆಯವರು ಭ್ರಷ್ಟಾಚಾರ ವಿರುದ್ಧ ಊದಿದ ಕಹಳೆ ದೇಶದಲ್ಲೆಲ್ಲಾ ಮೊಳಗಿತು. ಆ ಕಹಳೆಯ ಧ್ವನಿಗೆ ಜನಬೆಂಬಲದ ಒಕ್ಕೊರಲಿನ ಧ್ವನಿ ಮಾರ್ದನಿಸಿತು. ಜನಮತಕ್ಕೆ ಸರಕಾರ ಕೊನೆಗೂ ತಲೆಬಾಗಿತು. ಜನ ಲೋಕಪಾಲ ಮಸೂದೆಗೆ ಅಸ್ತು ಎಂದಿತು.

**2010**ರ ಒಂದು ಸಮೀಕ್ಷೆಯ ಪ್ರಕಾರ ಭಾರತ ಜಗತ್ತಿನ ಅತಿ ಭ್ರಷ್ಟ ಆಡಳಿತಗಳಲ್ಲಿ ಒಂದಂತೆ. ಕಪ್ಪು ಹಣದ ವಿಷಯದಲ್ಲಂತೂ ವಿಶ್ವದಲ್ಲಿ ಭಾರತವೇ ಪ್ರಥಮವಂತೆ. ಸ್ವಾತಂತ್ರ್ಯದ ನಂತರ ಸಮಾಜವಾದವನ್ನು ಒಳಗೊಂಡ ನಮ್ಮ ದೇಶದ ಆಡಳಿತ ವ್ಯವಸ್ಥೆಯಲ್ಲಿ ತೆವಳುತ್ತ ಬಂದ ಭ್ರಷ್ಟಾಚಾರವೆಂಬ ಪೆಡಂಬೂತ ಬೇರೂರಿ ತ್ರಿವಿಕ್ರಮನಂತೆ ಬೆಳೆದು ನಿಂತಿದ್ದಾದರೂ ಹೇಗೆ? ಬರ್ತ್ ಸರ್ಟಿಫಿಕೇಟ್‌ನಿಂದ ಹಿಡಿದು ಡೆತ್ ಸರ್ಟಿಫಿಕೇಟ್‌ನವರೆಗೂ ಕೈ ಬಿಸಿ ಮಾಡಬೇಕು ಎನ್ನುವದು ಜನರ ಅನುಭವ. ಇದೊಂದೇ ಸರ್ವೇ ಸಾಮಾನ್ಯ ಸಂಗತಿ ಎಂಬಂತೆ ನಾವದನ್ನು ಒಪ್ಪಿಕೊಂಡಿದ್ದಾದರೂ ಹೇಗೆ?

ನಮ್ಮ ಕೆಲಸ ಸುಲಭವಾಗಿ ಆದರೆ ಸಾಕು ಉಳಿದ ಉಸಾಬರಿ ನಮಗೇಕೆ? ಎನ್ನುವ ಮನೋಭಾವನೆ ಹೆಚ್ಚಿನವರದು. ಇನ್ನು ಮೌಲ್ಯಗಳ ಬಗ್ಗೆ ಆದರವಿರುವವನು ಕೂಡ 'ಕೇವಲ ನಾನೊಬ್ಬನು ಸರಿಯಾಗಿದ್ದರೆ ಜಗತ್ತು ಬದಲಾಯಿಸುತ್ತದೆಯೇನು?' ಎಂದು ಸುಲಭವಾದ ಮಾರ್ಗವನ್ನೇ ಹಿಡಿಯುತ್ತಾನೆ. ಭ್ರಷ್ಟರಿಂದಲೇ ತುಂಬಿಸಿಕೊಂಡ ಈ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವನ್ನು ಅಳಿಸಲು ಹೋದರೆ ವ್ಯವಸ್ಥೆಯು ಶಿಥಿಲವಾಗುತ್ತಿದೆಯೇನೋ ಎನ್ನುವ ಅಳುಕು ಮಾಡಿದರೂ ಅದು ಸಹಜವೇ ಅನಿಸುತ್ತದೆ. ಆದರೂ ಬಹಳಷ್ಟು ಜನರ ಮನದಲ್ಲಿ ಈ ವ್ಯವಸ್ಥೆಯ ಬಗ್ಗೆ ತುಂಬಿದ ಆಕ್ರೋಶ. ಆದರೆ ಅದರ ವಿರುದ್ಧ ಧ್ವನಿಯೆತ್ತುವ ಎದೆಗಾರಿಕೆ ಮಾತ್ರ ಇಲ್ಲ.

ಸತ್ಯ, ಧರ್ಮ, ನ್ಯಾಯವನ್ನು ಎತ್ತಿ ಹಿಡಿಯುವ ಸನಾತನ ಧರ್ಮದ ತಳಹದಿಯ ಮೇಲೆ ನಮ್ಮ ಪೂರ್ವಜರು ಕಟ್ಟಿದ ನಮ್ಮ ದೇಶದಲ್ಲಿ ಜೀವನದ ಮೌಲ್ಯಗಳು ಇನ್ನೂ ಜೀವಂತವಾಗಿವೆ. ಸಮರ್ಥ ನಾಯಕತ್ವದ ಮಾರ್ಗದರ್ಶನ ದೊರೆತರೆ ಅವು ದೃಢಗೊಳ್ಳುತ್ತವೆ. ಜನಪ್ರಿಯತೆಯನ್ನೇ ಉದ್ದೇಶವನ್ನಾಗಿರಿಸಿಕೊಳ್ಳದೆ, ತಮ್ಮ ವ್ಯಕ್ತಿಗತ ಸ್ವಾರ್ಥವನ್ನು ಬದಿಗೊತ್ತಿ ಜನರ ಹಿತಕ್ಕಾಗಿ ಹೋರಾಡುವ ನಾಯಕರು ನಮಗೆ ಬೇಕು. ಹಾಗೆಂದೇ ಅಣ್ಣಾ ಹಜಾರೆಯವರಿಗೆ ಜನಬೆಂಬಲದ ಪ್ರವಾಹವೇ ಹರಿದು ಬಂದಿತು. ನಮ್ಮಲ್ಲಿ ಅಂತಃಸತ್ವ, ಆತ್ಮಸಾಕ್ಷಿ ಇನ್ನೂ ಉಳಿದಿದೆ ಎನ್ನುವದರ ದ್ಯೋತಕವಿದು. ಅಣ್ಣಾ ಹಜಾರೆಯಂತಹ ಇನ್ನಷ್ಟು ನಾಯಕರು ನಮ್ಮಲ್ಲಿ ಬೆಳೆದು ಬರಲಿ, ಮೌಲ್ಯಾಧಾರಿತ ಪ್ರಜಾಪ್ರಭುತ್ವ ನಮ್ಮದಾಗಲಿ ಎನ್ನುವ ಆಶಾವಾದದೊಂದಿಗೆ ವಿರಮಿಸುತ್ತೇನೆ.

*Amita S Bhagwat*

e-mail : amitabhagwat@gmail.com

*PAGE DONATED BY : **ADVOCATE M.S. PANDIT, PUNE .***

# PRESIDENT'S MESSAGE

Dear Friends,

After successful completion of the fund raising program of Women Welfare Cell we can say that the year has ended with a high note. We do not want to describe the achievements or activities; but we are happy to see that the youngsters are coming forward to participate and attend the programs. This is a good sign. We should take this opportunity and further encourage them to be the members of the Managing Committee and to actively participate in the welfare activities of the Trust.

We are in the process of completing our Income & Expenditure Account & Balance Sheet for the year ended on 31st March 2011 so that we can call the Annual General Body Meeting soon. We request the interested members to join us in working towards achieving our GOAL. i.e. “EDUCATION, HEALTH & CARE FOR THE AGED”.

We are pleased to inform you that the money with respect to the Panvel Land is disbursed to the concerned members. However, 3 Members/ Legal Heir could not be reached so far as they are either abroad or have shifted their residence and they have not intimated about their new address. We are trying to find their new address. Their names are mentioned in this Sandesha. We are in the process of completing the legal formalities including the litigation of Mr. Kandpile and tax related issues. There are also some irregularities committed earlier which requires to be sorted out. We are confident that we will address all issues. We will keep the concerned members informed of the progress through the Sandesha.

There is no progress on NA for Dombvli land.

With warm regards.
**N.R. HEGDE**
*President*

## HAVYAKA NAGAR CO-OP. HOUSING SOCIETY (PROPOSED)

Inspite of the best efforts the following Members/ Legal Heir were not available at their address recorded with the Society. Any member knowing them is requested to inform them to contact the Havyaka office and collect their cheque regarding the Panvel plot.

1. Ms. Lalita V. Aital - L.M. 683
   Mahavir Building, 1st Floor,
   Room No. 12, Sovani Path,
   Girgaum, Mumbai - 400 004.
2. Mr. Y. S.Krishna - L.M. 711
   Flat No. 207,
   Shailesh Co-op. Hsg. Soc.,
   Sector 11, New Panvel.
3. Mr. G. T. Bhat - (Legal Heir of Late Mr. S. N. Bhat)
   P. B. 8241, Flat No. A-7/11,
   Pokar Kunj, Opp. Railway Station,
   Dahisar (West), Mumbai - 400 068.
4. Dr. R. K. Bhat, USA
5. Mr. Sadashiv V. Hegde, Kandivli
6. Mr. Ravindra Bhat, Kandivli
7. Krishna Y. S., New Panvel
8. Jayant Bhat, Airoli

## A Letter to the Editor

The Hon. Editor,
Havyaka Sandesha

**Consumer is the King**

Advertising companies have been chasing the consumers all along for selling their products. All are aiming at maximum sales and have realized fully that the consumer is the king. The great chase is going on in targetting the poor as well as the rich consumers. Profit maximization is the basic formula for production as well as service industries. There is monopolistic competition in the market and most of the products are branded. Many consumers are after certain brands only. They prefer particular brands over others though the advantages may be real or imaginary

Thanking you,

Yours faithfully
**S. M. Bhat**

*PAGE DONATED BY : **SMT. SHANTA V. HEGDE,** CARMICHAEL ROAD (DEC.-2011)*

# 20-3-2011 ರಂದು ಕರ್ನಾಟಕ ಸಂಘ ಮಾಟುಂಗಾದಲ್ಲಿ ಜರುಗಿದ 'ಕರ್ಕಿ ವೆಂಕಟರಮಣ ಶಾಸ್ತ್ರಿ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿದ ಶ್ರೀ ವಿಘ್ನೇಶ್ವರ ಶರ್ಮಾರವರು ನೀಡಿದ ಉಪನ್ಯಾಸ

ಈ ಸಭೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎನ್. ಆರ್. ಹೆಗಡೆಯವರೇ, ಶ್ರೀ ಪ್ರಕಾಶ ಭಂಡಾರಿಯವರೇ, ಶ್ರೀ ಧರಣೇಂದ್ರ ಕುರ್ಕುರಿಯವರೇ, ಶ್ರೀ ಜಿ.ಡಿ. ಜೋಶಿ ಅವರೇ, ಶ್ರೀ ಚಂದ್ರಶೇಖರ ಪಾಲೆತ್ತಾಡಿ ಅವರೇ, ಪ್ರಿಯ ಮಿತ್ರರೇ, ತಾಯಂದಿರೇ,

ಇದೊಂದು ಅಪೂರ್ವ ಸಂಭ್ರಮದ ಸಮಾರಂಭ. "ಗುಣೂಸಿ ಪೂಜಾ ಸ್ಥಾನಂ" ಆದದ್ದು. ಈ ಮುಂಬಯಿ ಪ್ರದೇಶದಲ್ಲಿ ಕನ್ನಡಿಗರೂ-ಹವ್ಯಕರೂ ಎಲ್ಲ ಸಮುದಾಯದವರೂ ಸೇರಿ ಧೀಮಂತ, ಛಲ-ಬಲದ ಒಬ್ಬ ಮಹಾನ್ ವ್ಯಕ್ತಿ - ಉತ್ತರ ಕನ್ನಡದ ಕರ್ಕಿ ಸೂರಿ ಕುಟುಂಬದ ಶ್ರೀ ವೆಂಕಟರಮಣ ಶಾಸ್ತ್ರಿಗಳ ಹೆಸರನ್ನು ಹಸಿರಾಗಿ ಚಿರಂತನವಾಗಿರಿಸಲು ಪ್ರಯತ್ನಿಸಿ, ಅವರ ಹೆಸರಿನ ಪುರಸ್ಕಾರ ನೀಡಲು ಯೋಚಿಸಿ ಮುಂದಾಗಿರುವುದು ಅತ್ಯಂತ ಅಭಿನಂದನೀಯ ಕಾರ್ಯವಾಗಿದೆ. ಪ್ರಸಿದ್ಧರ ಪ್ರಭಾವಿಗಳ, ಸಾಧಕರ, ಉಪಕಾರಿಗಳ ನೆನಪು, ಸ್ಮರಣೆ, ಆಗಾಗ ಮಾಡಬೇಕಾದುದು ಅವಶ್ಯ. ಅವರ ನಿಃಸ್ವಾರ್ಥ ಸೇವೆಯಿಂದ ಸಮಾಜ, ವ್ಯಕ್ತಿ- ಪ್ರದೇಶಗಳು ಬಹಳ ಪ್ರಯೋಜನ ಪಡೆದಿರುವುದು, ಅದನ್ನು ಸಂಪೂರ್ಣ ತೀರಿಸುವುದು ಸಾಧ್ಯವಿಲ್ಲದ್ದು. ಆದರೂ ಕೊನೆಯ ಪಕ್ಷ ಅವರ ಇಚ್ಛಾ-ಜ್ಞಾನ, ಕ್ರಿಯಾಶಕ್ತಿಯನ್ನಾದರೂ ಸ್ಮರಿಸಿಕೊಂಡರೆ ಅವರ ಋಣ ಕೆಲಮಟ್ಟಿಗಾದರೂ ನೀಗಬಲ್ಲದು.

ನಾವು ನಿತ್ಯ ದೇವತಾ ಸ್ಮರಣೆ ಮಾಡುತ್ತೇವೆ. ನಮ್ಮ ವಂಶದ ಗುರು-ಹಿರಿಯರನ್ನು ನೆನಪಿಸಿಕೊಳ್ಳುತ್ತೇವೆ, ಯಾಕೆ? ನಮ್ಮ ಇಂದಿನ ಸ್ಥಿತಿ-ಗತಿಗೆ, ಯೋಗ-ಕ್ಷೇಮಕ್ಕೆಲ್ಲ ಅವರೇ ಕಾರಣ ಕರ್ತರು, ಅವರನ್ನೊಮ್ಮೆ ನೆನಪಿಸಿಕೊಂಡರೆ ನಮಗೇನೋ ಹೊಸ ಸ್ಫೂರ್ತಿ ಸಿಗುತ್ತದೆ. ಪ್ರೇರಕ ಶಕ್ತಿ ಜಾಗೃತವಾಗುತ್ತದೆ. ಅವರೆಲ್ಲ ನಮಗೆ ಚೈತನ್ಯದಾಯಿಗಳು. ಏನಾದರೂ ಕಾರ್ಯ ಮಾಡುವಾಗ ಶ್ರೀ ಗಣಪತಿಗೆ ವಂದಿಸುತ್ತೇವೆ. ಜ್ಞಾನ ನೀಡಿದ ಗುರುಗಳನ್ನು ಶ್ರೀ ಗುರವೇ ನಮಃ ಅಂತ ಸ್ಮರಿಸಿಕೊಳ್ಳುತ್ತೇವೆ. ಇದರಿಂದಾಗಿ ನಾವು ಆರಂಭಿಸಿದ ಕಾರ್ಯ ಸುಗಮವಾಗಿ ಸಾಗುತ್ತದೆಂಬುದು ನಮ್ಮ ಅಚಲ ನಂಬಿಕೆ, ವಿಶ್ವಾಸ. ಈ ಪ್ರಪಂಚ ಬೆಳೆದು ಬಂದದ್ದು- ಬೆಳೆಯುತ್ತಿರುವ ವ್ಯವಹಾರಕ್ಕೆಲ್ಲ ಮೂಲ ದ್ರವ್ಯವೇ ಈ ನಂಬಿಕೆ, ವಿಶ್ವಾಸಗಳೇ ಆಗಿವೆ.

ಶ್ರೀಯುತ ವೆಂಕಟರಮಣ ಶಾಸ್ತ್ರಿಗಳೂ, ಸಹ ಮುಂದೊಂದು ದಿನ ತಮ್ಮ ಪ್ರತಿಷ್ಠಾನ ಸ್ಥಾಪಿಸಿ ಪುರಸ್ಕಾರ ನೀಡಿ ಗೌರವಿಸುತ್ತಾರೆಂಬ ಕಾರಣಕ್ಕಾಗಿ ಹೋರಾಟ ಮಾಡಿದವರಲ್ಲ. ಅದು ತನ್ನ ಕರ್ತವ್ಯವೇ ಅಂತ ತಿಳಿದು ಮಾಡಿದರು. ಪ್ರತಿಯೊಬ್ಬನೂ ತಾನು ತನ್ನ ಪರಿವಾರ ಸುತ್ತಲಿನ ಸಮುದಾಯದೊಂದಿಗೆ ಕೂಡಿ ಬಾಳುತ್ತಾನೆ.  ತಾನೊಬ್ಬನೇ ಯಾರ ಹಂಗೂ ಇಲ್ಲದೇ ಬದುಕಬಲ್ಲೆ ಎಂಬ ಧೈರ್ಯ ಯಾರಿಗೂ ಇರುವುದಿಲ್ಲ. ವ್ಯಕ್ತಿ-ಸಮಾಜ, ಲೋಕ ಹೀಗೆ ಪರಸ್ಪರ ಸೇರಿಕೊಂಡಾಗ ಪರಸ್ಪರರ ಅರಿವೂ ಅನುಭವಗಳೂ ಹೆಚ್ಚುತ್ತವೆ. ತಾನು ಎಲ್ಲರಿಗಾಗಿ ಆದರೆ ಎಲ್ಲರೂ ತನಗಾಗಿ ಆಗುತ್ತಾರೆ ಅಂತಲೇ ತಿಳಿದು ತಾನೂ ಸಮಾಜಕ್ಕೆ ಏನಾದರೂ ನೀಡಬೇಕೆಂಬ ಪ್ರೇರಣೆ ಪಡೆಯುತ್ತಾನೆ. ಶ್ರೀಯುತ ಶಾಸ್ತ್ರಿಗಳದ್ದೂ ಹಾಗೇ ಆದದ್ದು. ಹಲವಾರು ಜನರ ಸಂಪರ್ಕ, ಹತ್ತಾರು ಕಡೆಯ ವಾಸ್ತವ್ಯದಿಂದಾಗಿ ದಿನವೂ "ನವ ನವೋ ಭವತಿ" ಆದದ್ದು. ಹಾಗೇ ಅವರ ಜಾಯಾಮಾನ ಬೆಳೆದದ್ದು.

ಅವರ ಜನ್ಮಭೂಮಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಕರ್ಕಿ ಎಂಬ ಊರು. ಆರಂಭದ ವಿದ್ಯಾಭ್ಯಾಸ ಮುಗಿಸಿದ ನಂತರ ಬೇರೆ ಬೇರೆ ಕಡೆಯಲ್ಲಿ ಉಳಿದು ಹೆಚ್ಚಿನ ವಿದ್ಯಾಭ್ಯಾಸ ಪಡೆದರು, ಜನ್ಮಮೂಲದ ಹವ್ಯಕ ಸಮಾಜದ ಸಂಪರ್ಕ ಬೆಳೆದುಕೊಂಡಿತು. ಆಗ ಅವರಲ್ಲಿರುವ ಹಲ-ಕೆಲವು ನ್ಯೂನತೆಗಳು, ರೂಢವಾಗಿ ಬಂದ ಮೂಢ ಕಲ್ಪನೆ - ಪರಂಪರೆಯ ಹೆಸರಿನಲ್ಲಿ ಬಂದ ಆಚರಣೆಗಳು ಸರಿಯೆಂದು ಅನ್ನಿಸಲಿಲ್ಲ. ಸಮಾಜ ಗಟ್ಟಿಯಾಗಿ ಎದ್ದು ಎಲ್ಲರೊಂದಿಗೆ ಬೆಳೆಯುವ, ತನ್ನ ಅಸ್ತಿತ್ವವನ್ನು ಎತ್ತರಿಸಿಕೊಳ್ಳುವ ಸುಸಂಸ್ಕೃತ ಜನಾಂಗವಾಗಬೇಕೆಂದು ಬಯಸಿ ಅವರ ಕಣ್ಣು ತೆರೆಯಿಸುವ ಪ್ರಯತ್ನಕ್ಕೆ ಮುಂದಾದರು. ಆಗ ಅವರ ಮನಸ್ಸಿನ ಸಂವೇದನೆಯಿಂದ ಅಭಿವ್ಯಕ್ತಗೊಂಡು ಪ್ರಸಾರಗೊಂಡ ಕೃತಿಯೇ "ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ" ಅದು ಹವ್ಯಕರ ಮನೆಯ ಆಡು ಮಾತಿನಲ್ಲೇ ಇದ್ದದ್ದು. ಅದು ಹವ್ಯಕರಿಗೆಲ್ಲ ಅಚ್ಚು-ಮೆಚ್ಚು ಎನ್ನಿಸಿ ಅವರ ಮನಗೆದ್ದು- ಮುಂದೆ ಈ ಜನಾಂಗದಲ್ಲಿ ಪರಿವರ್ತನೆಯ ಹೊಸಗಾಳಿ ಬೀಸಿದ್ದು ಈ ಪ್ರಹಸನದ ತೀವ್ರ ಪರಿಣಾಮವೆಂಬುದನ್ನು ಮರೆಯುವಂತಿಲ್ಲ. ಈ ಪುಸ್ತಕಕ್ಕೆ ತಮ್ಮ ಹೆಸರನ್ನೂ ಹಾಕದೇ 'ಹವ್ಯಕ ಹಿತೇಚ್ಛು' ಅಂತಲೇ ಪ್ರಕಟಿಸಿದ್ದರು.

**ಅದರ ಮೊದಲ ಒಂದೆರಡು ಸಾಲು ಹೀಗೆ ಇದ್ದವು.**

"ಇಗ್ಗಪ್ಪ ಹೆಗಡೆ -ದ್ವಾ! ವಾಸಭ್ವಾವಾ, ನಿನ್ನ ಸಂಚೀ ಒಂದ್ಸಾರೀ ಕೊಡೋ ನೋಡ್ನ. ಬಂಧ್ಕವಳ ಹಾಕ್ತೇ. ಯನ್ನ್ ಸಂಚೀದು ತಂಬಾಕು ಛಲೋ ಇಲ್ಲೆ. ಈಗಿತ್ಲಾಗಿ ಛಲೋ ತಂಬಾಕೇ ಬರ್ತಾ ಇಲ್ಲೆ. ಅಂಗ್ಡೀ ಯವ್ದೂ ತರಸ್ತಾ ಇಲ್ಲೇ ಅಂತ ಕಾಣ್ತು. ತಂಬಾಕು ಆಂದ್ರೆ ಮನೇ ಕರೀ ತಿಂದ್ಹಾಂಗ ಆಗ್ತು.,

ವಾಸಪ್ಪ ಹೆಗಡೆ- ಯಂದೂ ಹಾಂಗಿದ್ದೇಯ. ಅಂಗ್ಡಿಯವೆಲ್ಲ ಒಂದೇ ಅಲ್ದನಾ"

ಹವ್ಯಕರು ಬಹುಮಟ್ಟಿಗೆ ಅಡಿಕೇ ಬೆಳೆಗಾರರು. ಮನೆಗೆ ಬಂದವರಿಗೆ ಎಲೆ-ಅಡಿಕೆ ಬಟ್ಟಲು ಮುಂದಿಟ್ಟು "ಆಸ್ರಿಗೆ" ಅಂತ ಕೇಳುವುದು. ಅವರ ಮನೆಗೆ ಹೋದವರಿಗೆ ಏನಾದರೂ ಆತಿಥ್ಯ ನೀಡುವುದು ಅವರ ಸಂಸ್ಕೃತಿ. ಕೊನೆಗೆ ಏನೂ ಬೇಡ ಅಂದರೆ "ಬಂಧ್ಕವಳ ನಾದ್ರೂ ಹಾಕು" ಅನ್ನುವುದು, ಹಾಗೆ ಕವಳಾ ಹಾಕ್ಕೊಂಡು ಬಂದ್ರೆ ಅವರು ತೃಪ್ತಿ ಪಡುತ್ತಾರೆ. ಪ್ರಯಾಣಕ್ಕೆ ಹೋಗುವಾಗಲೂ ಎಲೆ-ಅಡಿಕೆ ಸಂಚಿ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಈ ಇಗ್ಗಪ್ಪ ಹೆಗಡೆ-ವಿವಾಹ ಪ್ರಹಸನದ ವಸ್ತು-ವಿಚಾರ-ಚರ್ಚೆ-ಶೈಲಿಗಳೆಲ್ಲ ಆಕರ್ಷಕವಾಗಿದ್ದುದರಿಂದ ಧಾರವಾಡ ಆಕಾಶವಾಣಿಯವರು ನಿಲಯದ ಪ್ರಸಾರಕ್ಕೆ ಅನುಕೂಲವಾಗಿ ಹೊಂದಿಸಿ ಕೆಲವು ಸಾರೆ ಪ್ರಸಾರಗೊಳಿಸಿದ್ದು ಅದರ ಜನಪ್ರಿಯತೆಗೊಂದು ವಿಶಿಷ್ಟ ಸಾಕ್ಷಿ ಎನ್ನಲಡ್ಡಿ ಇಲ್ಲ. ಈ ಪುಸ್ತಕವು ಆಗ ಬೇಗ ಖರ್ಚಾಗಿ ಓದುಗರ ಅಪೇಕ್ಷೆಯ ಮೇರೆಗೆ ಶಿರಸಿಯಲ್ಲಿ ಜರುಗಿದ ಅ.ಭಾ. ಮಲೆನಾಡ ಸಂಮೇಳನದ ಹೊತ್ತಿಗೆ ಪುನಃ ಮುದ್ರಣಗೊಂಡಿತು.

ಈ ಹವ್ಯಕ ಜನಾಂಗದಲ್ಲಿ ಅಡ್ಡ ಹೆಸರು ಬಹಳ. ಇದ್ದ ಹೆಸರನ್ನು ಸಂಕ್ಷಿಪ್ತಗೊಳಿಸುವುದು. ಮನೆಗೂ ಒಂದೊಂದು ಅಡ್ಡ ಹೆಸರು. ಇದು ಯಾವ ಕಾರಣಕ್ಕೆ ಬಂತೋ ತಿಳಿಯದು. ಆಗ ಅದಕ್ಕೆ ಏನಾದರೂ ಸಂಬಂಧಪಟ್ಟದ್ದು ಇದ್ದಿರಬಹುದು. ನಂತರ ಕ್ರಮೇಣ ಕರೆಯುವಾಗ ಅಕ್ಷರಗಳೂ ಲೋಪ-ವ್ಯತ್ಯಸ್ತವಾಗಿ ಅದರ ಮೂಲ ಮರೆಯಾಗಿ ಸರಿಯಾದದ್ದು ಗೋಚರಿಸುವುದಿಲ್ಲ. ಮೊದಲಿಗೆ ಅದು ವ್ಯಕ್ತಿಗೆ ಅನ್ವಯವಾಗಿ ಕಾಲಾಂತರದಲ್ಲಿ ಆ ಕುಟುಂಬಕ್ಕೇ ಅದು ಅಂಟಿಕೊಂಡದ್ದೂ ಉಂಟು. ಒಂದೂರಿನಲ್ಲಿ ಎರಡು-ಮೂರು ಜನ ಒಂದೇ ಹೆಸರಿನವರು ಇದ್ದರೆ ಅಡ್ಡ ಹೆಸರಿನಿಂದ ಬೇಗ ಪರಿಚಯಿಸಿಕೊಳ್ಳಲು ಸುಲಭ ಎನ್ನುವುದೂ ಇದ್ದಿರಬಹುದು. ಒಂದು ಊರಿನಲ್ಲಿ ಭಟ್ಟರೆಂಬವರು ಶ್ರೀಮಂತರಾಗಿದ್ದರು. ಅವರನ್ನು ಯಾರೋ ಒಬ್ಬರು ಸಾಹುಕಾರ ಭಟ್ಟರು ಅಂತ ಕರೆದರು. ಅದು ಇಂದಿಗೂ ಹಾಗೇ ಇದೆ. ಆದರೆ ಅಂದಿನ ಶ್ರೀಮಂತಿಕೆ ಮಾತ್ರ ಇಲ್ಲ. ಹೀಗೇಯೇ ಎಷ್ಟೋ ಅಡ್ಡ ಹೆಸರಿನ ಪರಿಣಾಮವಾದದ್ದಿದೆ.

ಶ್ರೀ ವೆಂಕಟರಮಣ ಶಾಸ್ತ್ರಿಗಳಿಗೂ ಸೂರಿ ಎಂಬ ಕುಟುಂಬದ ಹೆಸರು ಸೇರಿಕೊಂಡಿದೆ. ಇದು ಹೇಗೆ ಬಂತು ಅಂತ ವಿಚಾರಿಸಿದರೆ ಸರಿಯಾಗಿ ತಿಳಿಯಲೇ

PAGE DONATED BY : **SHRI BALCHANDRA MARKANDE, DOMBIVLI**

ಇಲ್ಲ. ಈ ಸೂರಿ ಎಂಬುದಕ್ಕೆ ಹಲವು ಅರ್ಥಗಳು ಬರುತ್ತವೆ. ಸೂರ್ಯೋಪಾಸಕರು, ಎಲ್ಲವನ್ನೂ ತಿಳಿದವರು. ಶೂರತ್ವದಿಂದ ಶೌರಿಯಾಗಿ ನಂತರ ಸೂರಿ ಅಂತಲೂ ಆದದ್ದು ಇರಬೇಕು ಅಂತ ನನ್ನ ಭಾವನೆ. ಇದೇ ಕುಟುಂಬದ ಸೂರೀ ಶ್ರೀ ರಾಮಚಂದ್ರ ಶಾಸ್ತ್ರಿಗಳು ಎಂಬ ವಿದ್ವಾಂಸರಿದ್ದರು. ಕಳೆದ ವರ್ಷ ದಿವಂಗತರಾದವರು. ಅವರ ಹತ್ತಿರವೂ ಒಮ್ಮೆ ಈ ಬಗ್ಗೆ ಕೇಳಿದ್ದೆ. ಅವರೂ ಸಹ ನನ್ನ ಅಭಿಪ್ರಾಯವನ್ನೇ ಅನುಮೋದಿಸಿದ್ದರು. ಕರ್ಕಿಯಲ್ಲೇ ಬೂದಿ ಮಹಾಬಲೇಶ್ವರ ಭಟ್ಟರೆಂಬುವರೂ ಇದ್ದರು. ಅವರೂ ಶ್ರೀ ಶಾಸ್ತ್ರಿಗಳ ಜೊತೆಗೇ ಸೇರಿ ಹಲವು ಮಂತ್ರ ಪುಸ್ತಕ-ಪ್ರಯೋಗ, ಸ್ತೋತ್ರ ಸಂಗ್ರಹಗಳ ಸಿದ್ಧತೆಯಲ್ಲಿ ಸಹವರ್ತಿಗಳಾಗಿದ್ದರು. ಇನ್ನೊಬ್ಬರು ಶ್ರೀ ಸರ್ಪಕರ್ಣೇಶ್ವರ ಗಣಪತಿ ಭಟ್ಟರಿದ್ದರು. ಅವರ ಕುಟುಂಬದ ಮೂರು ತಲೆಮಾರಿನವರೆಗೆ ಹುಟ್ಟಿದ ಮಕ್ಕಳಿಗೆ ಕಿವಿಯ ಮೇಲೆ ಸರ್ಪಾಕೃತಿ ಚಿನ್ಹೆ ಇರುತ್ತಿತ್ತೆಂದು ಹೇಳಿದ್ದರು. ಅವರೂ ಪತ್ರಿಕೋದ್ಯಮಿಗಳೇ ಆಗಿ ಗ್ರಂಥಕರ್ತರೂ ಸಾಹಿತಿಗಳೂ ಸಾಹಸಿಗರೇ ಆಗಿದ್ದರು. ನಾನೂ ಅವರ ಜೊತೆಗೆ 'ಸಾಧನ' ಪತ್ರಿಕೆಯ ಸಹ ಸಂಪಾದಕನಾಗಿದ್ದೆ. ಈ ಕರ್ಕಿಯ ಊರಿನವರಿಗೆ ವಿಶೇಷ ಜಮೀನು ಕೃಷಿ ಕಾರ್ಯಗಳ ಒತ್ತಡವೇನೂ ಅಷ್ಟಾಗಿ ಇರುತ್ತಿರಲಿಲ್ಲ. ವಿದ್ವಾಂಸರಾದವರು ಸಮಾಜಮುಖಿಯಾಗಿ ಅವರಿಗೆ ಅಗತ್ಯವಿದ್ದ ಗ್ರಂಥ ರಚನೆ ಮಾಡಿ ಪೂರೈಸುವುದರ ಜೊತೆಗೆ ಸಮಾಜವನ್ನು ತಿದ್ದಿ ಅನಿಷ್ಠ ಪರಂಪರೆಯನ್ನು ಹೋಗಲಾಡಿಸಿ ಲೋಕಾನುಭವ ನೀಡುವ ಪತ್ರಿಕಾ ಪ್ರಕಟಣೆಯಲ್ಲೂ ಹಿಂದೆ ಬೀಳದೇ ಅದೂ ತಮ್ಮ ಕರ್ತವ್ಯವೆಂದೇ ತಿಳಿಯುವುದು ಇತ್ತು.

ಶ್ರೀಯುತ ವೆಂಕಟರಮಣ ಶಾಸ್ತ್ರಿಗಳಿಗೆ ಹವ್ಯಕ ಬಾಂಧವರ ಮೇಲೆ ತುಂಬಾ ಅಭಿಮಾನ, ಪ್ರೀತಿ-ವಿಶ್ವಾಸ, ಕಳಕಳಿ. ಈ ಜನಾಂಗದವರು ಮುಗ್ಧರು, ಸಾತ್ವಿಕ ಸ್ವಭಾವ. ಇನ್ನೊಬ್ಬರಿಂದ ತಾವೇ ಮೋಸಕ್ಕೆ ಒಳಗಾಗುವುದು, ಯುಕ್ತಾ ಯುಕ್ತತೆಯ ವಿಚಾರ-ವಿವೇಚನೆ ಇಲ್ಲದೇ ಯಾರಾದರೂ ಏನಾದರೂ ಹೇಳಿದರೆ ಅದನ್ನು ನಂಬತಕ್ಕವರಾಗಿದ್ದರಿಂದ ಅವರ ಆತ್ಮಶಕ್ತಿಯನ್ನು ಜಾಗ್ರತಗೊಳಿಸುವಲ್ಲಿ ಆದ್ಯ ಗಮನ ನೀಡಿದ್ದು ವಿಶೇಷ. ಈ ಹವ್ಯಕ ಸಮುದಾಯ ಇಂದು ವಿಸ್ತಾರಗೊಂಡು ಬೇರೆ ಬೇರೆ ಪ್ರದೇಶದಲ್ಲೂ ವಿಶಾಲವಾಗಿ ಹರಡಿಕೊಂಡು ಬೆಳೆದಿರುವುದು ಅವರ ಅಂತಃ ಸತ್ವದ ಸಾಕ್ಷಿ. ಎಲ್ಲೇ ಇದ್ದರೂ ತಮ್ಮ ಮೂಲ ಸಂಸ್ಕೃತಿಯನ್ನು -ಪರಂಪರೆಯನ್ನು, ಧರ್ಮನಿಷ್ಠೆಯನ್ನು ಎಂದಿಗೂ ಕಳೆದುಕೊಂಡವರಲ್ಲ. ಅವರ ಧ್ಯೇಯ ವಾಕ್ಯವೇ "ಸರ್ವೇ ಜನಾಃ ಸುಖಿನೋ ಭವಂತು" "ಮಾಕಶ್ಚಿತ್ ದುಃಖ ಭಾಗ್ವವೇತ್" ಎಂಬುದು. ಇಂಥ ಜನಾಂಗದ ಮೂಲ ಮೌಲ್ಯ, ನೆಲೆ-ಸೆಲೆಗಳನ್ನು ಅರಿತುಕೊಳ್ಳುವುದು ಒಳಿತು.

ಬನವಾಸಿಯ ಕದಂಬ ಅರಸು ಮಯೂರ ಶರ್ಮ ಕಟ್ಟಿ ಬೆಳೆಸಿದ ಕನ್ನಡ ರಾಜ್ಯ ಸಂಭ್ರಮ-ವೈಭವದಿಂದ ಕೂಡಿದ್ದು; ಕನ್ನಡದ ಪಂಪಕವಿ "ಆರಂಕುಶ ವಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ" ಎಂದು ಆಗಲೇ ಹೇಳಿದ್ದು. ಮರಿದುಂಬಿಯಾಗಿ - ಕೋಗಿಲೆಯಾಗಿಯಾದರೂ ಅದರ ಸೊಬಗು ಸವಿಯಲು ಬಯಸಿದ್ದು ವ್ಯಕ್ತವಾಗಿದೆ. ಸುಮಾರು ನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಇಂಥ ವೈಭವದ ಪ್ರದೇಶದಲ್ಲಿ ಕ್ಷಾಮ ತಲೆದೋರಿ ಮಳೆ-ಬೆಳೆ ಇಲ್ಲದೇ ಸಂಕಷ್ಟಕ್ಕೀಡಾದ ಪರಿಸ್ಥಿತಿ ಉಂಟಾಯಿತು. ಆಗ ರಾಜ ತನ್ನ ಆಪ್ತರೊಂದಿಗೆ ಪುರೋಹಿತರೊಂದಿಗೆ ಆಲೋಚನೆ ಮಾಡುತ್ತಾನೆ. ಆಗ ಅವರು ಕ್ಷಾಮ ಪರಿಹಾರಕ್ಕಾಗಿ ಅಹಿಃಚ್ಛತ್ರಕ್ಕೆ ಹೋಗಿ ಬೇರೆ ಬೇರೆ ಗೋತ್ರದ ಬ್ರಾಹ್ಮಣರನ್ನು ಕರೆ ತಂದು ಯಜ್ಞಯಾಗ ಮಾಡಿಸಬೇಕೆಂದರು. ಆಗ ರಾಜ ಅಲ್ಲಿಗೆ ಹೋಗಿ ಅವರನ್ನು ಓಲೈಸಿ ಕರೆತಂದು ಹೈಗುಂದದಲ್ಲಿ ಯಾಗ ನೆರವೇರಿಸಿದ. ಅದರಿಂದಾಗಿ ಯಾಗ-ಯೋಗವಾಗಿ ಸುವೃಷ್ಟಿಯಾಯಿತು. ನಂತರ ಸಂತೋಷಗೊಂಡ ರಾಜ ಇಲ್ಲಿಯೇ- ಅಂದರೆ ಈ ರಾಜ್ಯದಲ್ಲೇ ಇರಬೇಕೆಂದು ಕೇಳಿಕೊಂಡ ಹಾಗೂ ಮೂವತ್ತೆರಡು ಕುಟುಂಬಗಳನ್ನು ಕರೆಸಿಕೊಂಡು ಅವರ ವಾಸ್ತವ್ಯಕ್ಕೆ ಅಗ್ರಹಾರ ನಿರ್ಮಿಸಿ-ಉಂಬಳಿ ನೀಡಿ ಇಲ್ಲಿಯೇ ನೆಲೆಯಾಗಿ ಇರಬೇಕೆಂತಲೂ- ವೇದಾಧ್ಯಯನ- ಶಾಸ್ತ್ರ ವಿಚಾರ ಪ್ರಚಾರ ಪಡಿಸಲು ಪ್ರಾರ್ಥಿಸಿದ. ಅನಂತರ ಈ ಕುಟುಂಬಗಳೂ ಇಲ್ಲಿಯೇ ವಿಸ್ತೃತಗೊಂಡು ಉತ್ತರ ಕನ್ನಡ ದಕ್ಷಿಣ ಕನ್ನಡದ ಕರಾವಳಿಯ ಕೆಲವು ಭಾಗಗಳಲ್ಲಿ ಸೇರಿ "ಹೈಗ" ನಾಡಾಯಿತು ಎಂಬುದಾಗಿ ಉತ್ತರ ಸಹ್ಯಾದ್ರಿ ಖಂಡದಲ್ಲಿ ವಿವರಿಸಿದೆ.

**"ಹವ್ಯಾನಿ ಯತ್ರ ದೀ ಯಂತೇ ದೇವತಾಭ್ಯೋ ವಿಶೇಷತಃ**
**ತತೋ ಹವ್ಯ ಇತಿ ಖ್ಯಾತಃ ದೇಶೋ ಗೋ ರಾಷ್ಟ್ರ ನಾಮಕಃ"**

ಹವ್ಯ ಶಬ್ದದಿಂದ ಸ್ವಾಹಾ ಎಂದು ದೇವತೆಗಳಿಗೂ ಕವ್ಯ ಶಬ್ದದಿಂದ ಸ್ವಧಾ ಎಂದು ಪಿತೃಗಳಿಗೂ ಹವಿಸ್ಸನ್ನು ಅರ್ಪಿಸಿ ಅನುಗ್ರಹ ಪಡೆಯುವುದು ಈ ಜನಾಂಗದ ಮೂಲ ಸಂಸ್ಕೃತಿ. ಆದ್ದರಿಂದ ಈ ಹವ್ಯಕ ಹೆಸರು ಬಂತೆಂಬುದು ಇದರಿಂದ ತಿಳಿದು ಬರುತ್ತದೆ. ಇಷ್ಟೇ ಅಲ್ಲದೇ ಸಾಮಾಜಿಕ ವ್ಯವಸ್ಥೆಗಾಗಿ ಭಟ್ಟ, ಪ್ರಭು(ಹೆಗಡೆ) ಯಾಜೀ, ಸಭಾಹಿತ, ಮಧ್ಯಸ್ಥ, ಅವಭೃತ. ಹೀಗೆ ಆಯಾ ಕಾರ್ಯಗಳಿಗೆ ಅನುಕೂಲವಾಗಿ ನಿಯೋಜನೆ ಮಾಡಿದ್ದೂ ಇದೆ.

ಇವರಿಗೆ ವಸಿಷ್ಠ, ವಿಶ್ವಾಮಿತ್ರ, ಕಾಶ್ಯಪ, ಜಮದಗ್ನಿ, ಗೌತಮ ಆಂಗೀರಸ, ಭಾರದ್ವಾಜ್, ಹೀಗೆ ಏಳು ಗೋತ್ರಗಳು, ಯಜರ್ವೇದಶಾಖಾ, ಬೋಧಾಯನ ಸೂತ್ರ. ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಹೀಗೆ ಅಶುಕರ್ಮಗಳೂ ಇರುತ್ತವೆ. ಸೂರ್ಯ, ಗಣಪತಿ, ಅಂಬಿಕಾ, ಶಿವ, ವಿಷ್ಣು ಹೀಗೆ ಪಂಚದೇವತಾ ಪೂಜೆಗಳಿದ್ದು, ಶ್ರೀ ಶಂಕರಾಚಾರ್ಯರು ಸುಬ್ರಹ್ಮಣ್ಯನನ್ನೂ ಸೇರಿಸಿ ಷಣ್ಮತ ಸ್ಥಾಪನಾಚಾರ್ಯರೆಂದು ಹೆಸರು ಬಂತೆಂದೂ ಹೇಳಲಾಗಿದೆ. ಅಲ್ಲಿಂದ ಮುಂದೆ ಹವ್ಯಕ ಜನಾಂಗದಲ್ಲಿ ಬಂದು ನಿರ್ದಿಷ್ಟ ಸ್ವರೂಪದಲ್ಲಿ ನಡೆ-ನುಡಿ, ಆಚಾರ-ವಿಚಾರಗಳೆಲ್ಲ ಬೆಳೆದು ಬಂದದ್ದು ಎಂದು ತಿಳಿಯಬಹುದಾಗಿದೆ. ಹಾಗೇ ಹಿಂದೆ ಇದ್ದ ಇಲ್ಲಿಯ ಬುಡಕಟ್ಟು ಜನಾಂಗದ ಸಂಪ್ರದಾಯದ ಛಾಯೆಯೂ ಸೇರಿರಬಹುದು, ಪ್ರಾದೇಶಿಕ ಬಾಂಧವ್ಯ-ಭಾವೈಕ್ಯತೆಯ ಕಾರಣವೂ ಇದ್ದಿರಬಹುದು. ಹವ್ಯಕದ ಮೂಲ ಉಪಾಸ್ಯದೇವತೆ ಗಾಯತ್ರೀ ಮಂತ್ರ. ಮಗನಿಗೆ ಎಂಟು ವರುಷದ ನಂತರ ಉಪನಯನದ ಕಾಲ ಆರಂಭ. ಆಗ ಆತನಿಗೆ ದ್ವಿಜನ್ಮ. ಅಂದರೆ ಬ್ರಹ್ಮಚರ್ಯಾಶ್ರಮದ ದೀಕ್ಷೆ. ಅಗ್ನಿಯ ಸಂನಿಧಾನದಲ್ಲಿ ಈ ಗಾಯತ್ರಿಯ ಉಪದೇಶ. ನಂತರ ಅದನ್ನು ಅನುಷ್ಠಾನ ರೀತ್ಯಾ ಉಳಿಸಿ ಬೆಳೆಸಿಕೊಳ್ಳುತ್ತಿರಬೇಕು, ಇದರಿಂದ ಬ್ರಹ್ಮಶಕ್ತಿಯ ವಿಕಾಸ, ಧೀಶಕ್ತಿಯ ಜಾಗೃತಿ. ಇದು ವಿಶ್ವಾಮಿತ್ರ ಮಹರ್ಷಿಯ ಕೊಡುಗೆ.

ಹವ್ಯಕರ ಭಾಷೆ ಕನ್ನಡ. ಆಡು ಮಾತು ಇದೇ ಆದರೂ ಸ್ವಲ್ಪ ಬದಲಾವಣೆ. ಹಿಂದಿನಿಂದಲೂ ಕನ್ನಡವನ್ನೇ ಆಡುತ್ತ ಬಂದವರು. ಈ ಭಾಷೆ ಬಂದದ್ದು ಭಾವನೆಯನ್ನು ವ್ಯಕ್ತಗೊಳಿಸಲಿಕ್ಕೆ. ನಂತರ ಆಗಾಗ ಅದು ಸೌಂದರ್ಯ ತುಂಬಿಕೊಳ್ಳುತ್ತ ಬೆಳೆಯುತ್ತ ಬಂದು ಇದೀಗ ಶಾಸ್ತ್ರೀಯ ಸ್ಥಾನಮಾನವನ್ನೂ ಪಡೆಯುವಂತಾಗಿದೆ. ಈ ಭಾಷೆಯನ್ನು ಉಳಿಸಿ ಬೆಳೆಸಿದ ಶ್ರೇಯಸ್ಸು ಕನ್ನಡಿಗರಿಗೆ ಸೇರಬೇಕಾಗಿದ್ದರೂ ಹವ್ಯಕರಿಗೂ ಪಾಲುಂಟು ಎಂಬುದನ್ನು ಮರೆಯುವಂತಿಲ್ಲ. ಭಾಷೆಯ ನಂತರ ಲಿಪಿಯ ಆಗಮನ. ಹಿಂದೆ ಮುದ್ರಣದ ವ್ಯವಸ್ಥೆ ಅಷ್ಟಾಗಿ ಇರಲಿಲ್ಲ.

ಆಗ ರಾಮಾಯಣ-ಭಾರತ ಗ್ರಂಥಗಳನ್ನು ತಾಳೇಗರಿಯಲ್ಲಿ ತಜ್ಞರಿಂದ ಬರೆಸಿ ಇರಿಸಿಕೊಳ್ಳುತ್ತಿದ್ದರು. ಸಂಜೆಯ ಹೊತ್ತು ಮನೆಯ ಜಗುಲಿಯಲ್ಲಿ ಎಲ್ಲರೂ ಕೂತು ಯಾರಾದರೊಬ್ಬರು ರಾಗಬದ್ಧವಾಗಿ ಓದುತ್ತಿದ್ದರು. ಇದರಿಂದಾಗಿ ಮಕ್ಕಳಿಗೂ ಹೆಂಗಸರಿಗೂ ಭಾರತ ರಾಮಾಯಣಗಳ ಕಥಾ ಪರಿಚಯ ಸುಲಭವಾಗಿ ಆಗಿ ಬಿಡುತ್ತಿತ್ತು. ಹವ್ಯಕರ ಮಂತ್ರ-ತಂತ್ರ ಪ್ರಯೋಗಗಳಿಗೆಲ್ಲ ಬ್ರಹ್ಮಲಿಪಿ ಅಂದರೆ ತಿಗಳಾರಿಗಳಲ್ಲೇ ಇದ್ದು ಪೌರೋಹಿತ್ಯ ನಡೆಸತಕ್ಕವರ ಆಸ್ತಿಯಂತೇ ಆಗಿರುತ್ತಿತ್ತು. ಅದನ್ನು ಆವಶ್ಯವುಳ್ಳವರು ಮಾತ್ರ ಅದನ್ನು ಪಡೆದುಕೊಂಡು ಬರೆದುಕೊಳ್ಳುತ್ತಿದ್ದರು. ಸಾಮಾನ್ಯ ಜನರಿಗೆ ಈ ಲಿಪಿಯ ಪರಿಚಯವೇ ಇರುತ್ತಿರಲಿಲ್ಲ.

ಇದನ್ನು ತಿಳಿದ ಸೂರಿ ವೆಂಕಟರಮಣ ಶಾಸ್ತ್ರಿಗಳು ಇಂಥ ತೊಂದರೆಗಳಿಂದ ಪೌರೋಹಿತ್ಯ ಸಂಸ್ಕಾರ ಕಾರ್ಯಕ್ಕೆ ಹಿನ್ನಡೆಯಾದೀತೆಂದು ತಿಳಿದು ಶ್ರೀ ಬೂದೀ ಮಹಾಬಲೇಶ್ವರ ಭಟ್ಟರ ಸಹಕಾರ ಪಡೆದು ಸಂಯುಕ್ತವಾಗಿ ವೆಂಕಟೇಶೀಯ ಪ್ರಯೋಗ ಹಾಗೂ ಹಲವಾರು ಗ್ರಂಥಗಳನ್ನೂ ತುರಂಗ ಭಾರತವೇ ಮೊದಲಾದ ಕನ್ನಡ ಕಾವ್ಯಗಳನ್ನೂ ಮುಂಬಯಿಯಲ್ಲಿ ಅಚ್ಚು ಹಾಕಿಸಿ ಉತ್ತರ ಕನ್ನಡ ಜಿಲ್ಲೆಯಲ್ಲಿ

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , past President, H.W.T. (Dec.-2011)*

ಪ್ರಚಾರಪಡಿಸಿದ್ದು ಬಹುದೊಡ್ಡ ಉಪಕಾರದ ಸಂಗತಿ. ಈ ಎಲ್ಲ ಕಾರಣಗಳಿಂದ ಅವರ ಹೆಸರು ಹಚ್ಚ ಹಸಿರಾಗಿ ಉತ್ತರ ಕನ್ನಡಕ್ಕಿಂತಲೂ ಮುಂಬೈಯಲ್ಲೇ ಹೆಚ್ಚು ಬೆಳೆದಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿಯ ಜನರ ಔದಾರ್ಯ, ಗುಣಕ್ಕೆ ತಕ್ಕ ಮನ್ನಣೆ, ಪುರಸ್ಕಾರ ನೀಡಿರುವುದಕ್ಕಾಗಿ ಅವರನ್ನೆಲ್ಲ ಅಭಿನಂದಿಸಬೇಕಾಗಿದೆ.

ನಮ್ಮ ಕನ್ನಡಿಗರು ಹೆಚ್ಚು ಸಂಯಮಶೀಲರು, ನಾಡು-ನುಡಿ, ವಿವಾದ-ವಿಚಾರಗಳೆಲ್ಲ ಬಂದಾಗ ಉದ್ರಿಕ್ತರಾಗಿ ದಾಂಧಲೆ ಮಾಡಿದವರಲ್ಲ. ಹಾಗಂತ-ದುರ್ಬಲರೂ ಅಲ್ಲ. ಅದರಲ್ಲೂ ಹವ್ಯಕರು ಸ್ವಾಭಿಮಾನಿಗಳೂ ಶಾಂತಪ್ರಿಯರೂ ಆದವರು. 'ಸಹವೀರ್ಯಂಕರವಾವಹೈ, ಮಾವಿದ್ವಿಷಾವಹೈ' ಅಂತಲೇ ವರ್ತಿಸಿದವರು, ವೇದ-ಉಪನಿಷತ್ತುಗಳು ಬೋಧಿಸಿದ ಛಾಯೆಯಲ್ಲೇ ಬೆಳೆದವರು. "ಮಾತೃದೇವೋಭವ, ಪಿತೃ ದೇವೋಭವ" ಅಂತಲೇ ತಿಳಿದವರು. ಮನೆಗೆ ಬಂದವರನ್ನು "ಅತಿಥಿ ದೇವೋಭವ" ಅಂತ ಆದರಿಸಿ ಸತ್ಕರಿಸಿದವರು. "ಕೃಣ್ವಂ ತೋ ವಿಶ್ವಮಾರ್ಯಂ" ಅಂತ ಅಪೇಕ್ಷೆ ಪಟ್ಟವರು. ಈ ಆರ್ಯದಲ್ಲೇ ಹವ್ಯಕರೂ ಸೇರಿದವರು. "ಸತ್ಯಾನ್ನ ಪ್ರಮದಿತವ್ಯಂ" "ಧರ್ಮಾನ್ನಪ್ರಮದಿತವ್ಯಂ" ಸತ್ಯ-ಧರ್ಮಗಳಿಂದ ಪ್ರಮಾದ ಹೊಂದಬೇಡ ಎನ್ನುವುದೇ ಅವರ ಉಸಿರು.

ಪ್ರಿಯ ಮಿತ್ರರೇ,

ಕರ್ಕಿ ಸೂರಿ ಶ್ರೀ ವೆಂಕಟರಮಣ ಶಾಸ್ತ್ರಿಗಳು ಉದಾರಚರಿತರು, ಚಿಂತಕರು, ಪ್ರಾತಃಸ್ಮರಣೀಯರು. ಅವರ ಕನಸು, ಆಶೋತ್ತರಗಳು ಬಹಳಷ್ಟು ಇದ್ದವು. ಅವರ ಉದ್ದೇಶದ ಅನೇಕ ಸಾಮಾಜಿಕ ಸುಧಾರಣೆಯ ಕಾರ್ಯಗಳು ಹಲವು ವಿಘ್ನ-ವಿರೋಧಗಳಿಂದ ಸಾಧ್ಯವಾಗದೇ ಇದ್ದಿರಬಹುದು. ಆದರೂ ಒಬ್ಬ ಮನುಷ್ಯನ ಜೀವಿತದ ಸಾಮಾನ್ಯ ಅವಧಿಯಲ್ಲಿ ಸಾಧಿಸಿದ್ದು ಸಣ್ಣದಾಗೇನೂ ಇಲ್ಲ. ಅವರ ಅಪ್ರತಿಮ ಸಾಹಸವನ್ನು ಮೆಚ್ಚಲೇ ಬೇಕಾದದ್ದು. ಸಮಾಜದಿಂದ ಪಡೆದದ್ದು ಕಡಿಮೆ, ನೀಡಿದ್ದು ಹೆಚ್ಚು. ಇಂಥ ಮಹಾಮಹಿಮರು, ಸಾಧಕರು ಈ ಪುಣ್ಯಭೂಮಿಯಲ್ಲಿ ಇನ್ನಷ್ಟು ಜನರು ಹುಟ್ಟಿ ಬರಲಿ, ಅವರನ್ನು ಸ್ಮರಿಸುವ ಸಮಾರಂಭದಿಂದ ನಮ್ಮಲ್ಲೂ ಅಂಥವರ ಜೀವನಾದರ್ಶ, ಮೌಲ್ಯಗಳು, ಸಾಹಸ-ಸಾಧನೆಗಳು ಮೈಗೂಡಲಿ, ಅಂತ ಹಾರೈಸುವ ಮುನ್ನ ಇಷ್ಟರ ಮಟ್ಟಿಗಾದರೂ ಅಂಥ ಮಹನೀಯರ ಹೆಸರನ್ನು- ಸ್ಮರಣೆಯನ್ನು ಜೀವಂತವಾಗಿರಿಸುವುದಕ್ಕೆ ಇಲ್ಲಿಯ ಉದಾರ ದಾನಿಗಳನ್ನೂ ಹವ್ಯಕ ಹಾಗೂ ಇತರ ಕನ್ನಡಿಗರನ್ನೂ ಈ ಪ್ರತಿಷ್ಠಾನದ ಕ್ರಿಯಾಶೀಲತೆಯನ್ನೂ ಕೃತಜ್ಞತೆಯಿಂದ ಸ್ಮರಿಸಿ ನೀವು ನೀಡಿದ ಈ ಪ್ರಶಸ್ತಿಯನ್ನು ವಿನಮ್ರತೆಯಿಂದ ಸ್ವೀಕರಿಸಿ, ನನ್ನಲ್ಲಿ ಇನ್ನಷ್ಟು ಸ್ಫೂರ್ತಿ ಜೀವನೋತ್ಸಾಹ ಹೆಚ್ಚಿಸಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ. "ಸರ್ವೇಜನಾಃ ಸುಖಿನೋ ಭವಂತು" ಅಂತ ಹಾರೈಸುತ್ತೇನೆ. ಎಲ್ಲರಿಗೂ ನಮಸ್ಕಾರಗಳು.

## APPEAL

**In view of making 'HAVYAKA SANDESHA' more popular, readers friendly and useful, we want more contribution from our members.**

**We request readers to contribute articles expressing their knowledge, experience & talents in the form of articles, short stories, poems etc. and help us to make it more interesting and useful.- Editorial Board**

**'ಹವ್ಯಕ ಸಂದೇಶ' ಹೆಚ್ಚು ಜನಪ್ರಿಯವಾಗಿ, ವೈವಿಧ್ಯತೆಯೊಂದಿಗೆ ನಿಮ್ಮ ಕೈ ಸೇರುವಂತೆ ಮಾಡಲು ನಾವು ಉತ್ಸುಕರಾಗಿದ್ದೇವೆ. ಈ ದಿಕ್ಕಿನಲ್ಲಿ ಹೆಜ್ಜೆಯಿಡಲು ನಿಮ್ಮ ಸಹಕಾರ ಅಗತ್ಯ.**

**ನಿಮ್ಮ ಅನುಭವ, ಜ್ಞಾನ, ಸಣ್ಣ ಕಥೆ, ಕವನಗಳನ್ನು ನಮಗೆ ಕಳುಹಿಸಿ ಸಹಕರಿಸಿದಲ್ಲಿ ನಾವು ಪ್ರಗತಿ ಸಾಧಿಸಬಹುದು. – ಸಂಪಾದಕ ಮಂಡಳಿ**


**SUVITEK INTERNATIONAL**

**Authorised Dealers for : ARMSTRONG, INTERARCH, CRIL**

- ★ PRE-ENGINEERED BUILDINGS
- ★ ROOFINGS
- ★ WALL CLADDINGS
- ★ THERMAL INSULATIONS
- ★ FALSE CEILINGS
- ★ FALSE FLOORINGS
- ★ BLINDS
- ★ SIGNAGES

◆

**5/98, Jayvijay Society, Sahar Road, Mumbai-400 099 India**
**Tel. : 2834 2952 ● Fax : 2824 8794**
**E-mail : suvitek@gmail.com**

*ADVT.*

UIL

**UGRU INDUSTRIES**

*With Best Compliments from*

**UGRU INDUSTRIES**
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*



*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR** (DEC.-2009)*

# ಸುಂದರ ಕಾಂಡ

1) ಸುಂದರವಾದ ಸುಂದರ ಕಾಂಡವು
ಸುಂದರವು ಅತಿ ಸುಂದರವು ।
ಮಾರುತಿ ವಿಜಯವ ನೆನೆದರೆ ಮನವು
ಭಕ್ತಿಯಿಂ ಪರವಶವಾಗುವುದು ॥ ಪಲ್ಲವಿ॥

2) ಸುಗ್ರೀವನೆಂಬ ವಾನರ ರಾಜನು
ಶ್ರೀರಾಮನ ಪ್ರಿಯ ಮಿತ್ರನಾಗಿರಲು ।
ಸೀತೆಯ ಹುಡುಕಲು ನಾಲ್ಕೂ ದಿಕ್ಕಿಗೆ
ವಾನರ ಸೇನೆಯ ಕಳುಹಿಸಿದನು ॥ ಸುಂದರ॥

3) ನಳನು ನೀಲನು ಜಾಂಬವಂತನು
ವಾಲಿಯ ಸುತನು ಅಂಗದನು।
ಹನುಮನ ಸಹಿತ ಸಕಲ ಸುಭಟರು
ಕೂಡಲೇ ಹೊರಟರು ದಕ್ಷಿಣದೆಡೆಗೆ ॥ ಸು॥

4) ಶತಯೋಜನ ವಿಸ್ತೀರ್ಣದ ಸಮುದ್ರವ
ದಾಟುವುದು ಬಲು ದುಸ್ತರವು ।
ಜಾನಕಿ ಮಾತೆಯ ಕಾಣುವುದೆಂತೆಂದು
ಚಿಂತಿಸಿ ನೊಂದಿತು ಕಪಿಗಣವು ॥ ಸು॥

5) ಅತಿ ಭೀಕರವಾಗಿರ್ಪ ಸಮುದ್ರವ
ದಾಟಲು ಶಕ್ತನು ಅಂಜನಿಸುತನು ।
ಎಂದೆನ್ನುತ ಬಲು ಉತ್ಸಾಹದಲಿ
ಕುಣಿದಾಡಿತು ಆ ಕಪಿ ವರ್ಗ ॥ ಸು॥

6) ಆಂಜನೇಯ ಮಹೇಂದ್ರ ಗಿರಿ ಏರಿ
ತನ್ನ ಶರೀರವ ಹಿಗ್ಗಿಸಿದ ।
ಬಾರಿ ಬಾರಿಗೂ ಶ್ರೀರಾಮ ನೆನೆಯುತ
ಅತಿ ವೇಗದಿ ಗಗನದಿ ವಿಹರಿಸಿದ ॥ ಸು॥

7) ಸಾಗರರಾಜನ ಕೋರಿಕೆ ಮೇರೆಗೆ
ಮೇಲೆದ್ದು ಬಂದನು ಮೈನಾಕ ।
ಶ್ರಮ ಪರಹಾರಕೆ ನನ್ನಲ್ಲಿ ಕಾಲಿಡು
ಎಂದನು ವಿನಯದಿ ಗಿರಿರಾಜ ॥ ಸು॥

8) ರಾಮನ ಕಾರ್ಯವ ಮಾಡಿದ ಮೇಲೆಯೇ
ಜಾನಕಿ ಮಾತೆಯ ನೋಡಿದ ಮೇಲೆಯೇ ।
ತನಗೆ ವಿರಾಮ ಎನ್ನುತ ಹನುಮ
ಪರ್ವತರಾಜಗೆ ಗೈದ ಪ್ರಣಾಮ ॥ ಸು॥

9) ಪವನ ಸುತನ ಪರೀಕ್ಷೆ ಗೈಯಲು
ದೇವತೆಗಳು ನಿರ್ಣಯಿಸಿದರು ।
ನಾಗ ಜನನಿ ಆ ಸುರುಸಾ ದೇವಿಗೆ
ಪ್ರಾರ್ಥನೆ ಮಾಡಿ ಕಳಿಸಿದರು ॥ ಸು॥

10) ವಿಕೃತರೂಪದಿ ಸುರಸಾ ದೇವಿ
ಗುಹೆಯಂತಿರುವ ತನ್ನ ಮುಖವನ್ನು ತೆರೆದು।
ಬಾಯಿಯ ದಾಟಿ ಹೋಗಲು ಬಿಡೆನೆಂದು
ಹನುಮನ ದಾರಿಗೆ ಅಡ್ಡ ನಿಂತಳು

*ಮೂಲ : ತೆಲುಗು   ಕನ್ನಡಕ್ಕೆ ಅನುವಾದ :* **ಶ್ರೀಮತಿ ದೇವಿ ಭಟ್**



## ಚಿಂತನ - ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ। ಪಿ. ಎಂ. ಹೆಗಡೆ, ಶಿರಸಿ**

### ಅವರು ಏನೆಂದರು?

ಮಾನ್ಯರೇ ಹಾಗೂ ಸಹೋದ್ಯೋಗಿಗಳೇ, ಇಂದು ಶ್ರೀಮತಿ ವೀಣಾರವರು ನಿವೃತ್ತರಾಗುತ್ತಿದ್ದಾರೆ. ಅವರ ಸುದೀರ್ಘ ಸೇವೆಯನ್ನು ಸ್ಮರಿಸಿಕೊಂಡು ಅವರನ್ನು ಬೀಳ್ಕೊಡಲೆಂದೇ ನಾವೆಲ್ಲ ಇಲ್ಲಿ ಸೇರಿದ್ದೇವೆ. ನಾವು ಇಷ್ಟೆಲ್ಲ ಸಹೋದ್ಯೋಗಿಗಳು ಒಟ್ಟಿಗೆ ಸೇರಿ ಅವರನ್ನು ಬೀಳ್ಕೊಡುತ್ತಿರುವದು ಸಣ್ಣ ಮಾತಲ್ಲ. ಇಂದು ಅವರು ನಮ್ಮ ಸಂಸ್ಥೆಗೆ ಸಲ್ಲಿಸಿದ ಸೇವೆಯನ್ನು ನೆನೆಯಲೇಬೇಕು. ಅವರು ಸೇವೆಗೆ ಸೇರಿದಂದಿನಿಂದ ಈ ಸಂಸ್ಥೆಗೆ ಸೇವೆ ಸಲ್ಲಿಸುತ್ತಲೇ ಇದ್ದಾರೆ. ಇಂದು ಅವರು ನಿವೃತ್ತರಾಗುತ್ತಿರುವುದರಿಂದ ಅವರ ಸೇವೆಯನ್ನು ಅವರ ಮೇಲಾಧಿಕಾರಿಗಳು ಹಾಗೂ ಅವರೊಡನೆಯೇ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಗಳು ಇಂದು ನೆನೆಸಿಕೊಂಡು ಅವರನ್ನು ಬೀಳ್ಕೊಡುವದು ಸಂಪ್ರದಾಯ ಹಾಗೂ ಸಹಜ. ಸೇವೆಯ ಅವಧಿ ಮುಗಿದೊಡನೆ ಅವರು, ಅಂತೆಯೇ ನಾವು. ಅಂತೆಯೇ ಎಲ್ಲರೂ ನಿವೃತ್ತರಾಗಬೇಕಲ್ಲವೇ? ಈ ಸಂದರ್ಭದಲ್ಲಿ ಅವರನ್ನು ಬೀಳ್ಕೊಟ್ಟು ಅವರಿಗೆ ಒಳ್ಳೆಯದಾಗಲಿ, ಅವರ ಜೀವನದ ಉಳಿದ ದಿನಗಳು ಸುಖ- ಸಂತೋಷದಿಂದ ತುಂಬಲಿ ಎಂದು ಹಾರೈಸಿ, ಅವರನ್ನು ಬೀಳ್ಕೊಡುತ್ತೇನೆ ಹಾಗೂ ಅವರು ನಮ್ಮನ್ನು ಮರೆಯಬಾರದೆಂದು ವಿನಂತಿಸಿಕೊಳ್ಳುತ್ತೇನೆ.

ಇದು ನಿಸಿಮ್ ಎಸ್‌ಕೀಲ ಎಂಬ ಭಾರತೀಯ ಆಂಗ್ಲಕವಿಯವರ 'ಗುಡ್ ಬೈ ಶ್ರೀಮತಿ ವೀಣಾ' ಎಂಬ ತಲೆಬರಹದ ವಿಡಂಬನಾತ್ಮಕ ಕವನದ ಸಾರಾಂಶ ಈ ಕವಿತೆಯನ್ನು ಓದುತ್ತಿದ್ದಂತೆ, ಇಂಗ್ಲೀಷ್ ಪ್ರಾಧ್ಯಾಪಕರೊಬ್ಬರು ಜರ್ಮನಿಯ ಕವಿ ಗಯಟೆಯನ್ನು ಕುರಿತು ಒಂದು ತಾಸು ಅಸ್ಖಲಿತವಾಗಿ, ನಿರರ್ಗಳವಾಗಿ, ಪ್ರಾಸ ಅನುಪ್ರಾಸಗಳಿಂದೊಡಗೂಡಿದ. ಅವರ ಅನನುಕರಣೀಯ ಆಂಗ್ಲ ಭಾಷೆಯಲ್ಲಿ ಜನರನ್ನು ಮಂತ್ರಮುಗ್ಧಗೊಳಿಸಿ, ಸುಮಧುರ ಕಂಠದಿಂದ, ಆಡಿದ ಮಾತುಗಳು ನೆನಪಿಗೆ ಬಂದವು. ಅವರ ಭಾಷಣ ಮುಗಿದ ಮೇಲೆ ಗಯಟೆಯನ್ನು ಕುರಿತು ಅವರು ಏನು ಹೇಳಿದರು? ಎಂದು ನನ್ನ ಪಕ್ಕದಲ್ಲಿದ್ದ ಸ್ನೇಹಿತನನ್ನು ಕೇಳಿದ. ಅದಕ್ಕವನು ನನಗೂ ಗೊತ್ತಾಗಲಿಲ್ಲ ಎಂದುತ್ತರಿಸಿದನು.

ನನ್ನ ಸೋದರಮಾವನ ಹತ್ತಿರ ನೀನು ಎಷ್ಟು ಗಂಟೆಗೆ ಇಲ್ಲಿಗೆ ಬಂದೇ? ಎಂದು ಕೇಳಿದರೆ ಅವನು ಬೆಳಿಗ್ಗೆ ತಾನು ಮಾಡಿದ ಕೆಲಸಗಳ ವಿವರಣೆ ಕೊಟ್ಟು, ತಾನು ಬಸ್ ನಿಲ್ದಾಣಕ್ಕೆ ಬಂದ ವರದಿ ಮಾಡಿ, ಬಸ್ಸಿಗಾಗಿ ಕಾದ ಕಾಲದ ಅವಧಿ ತಿಳಿಸಿ, ಮಹಿಳೆಯರನ್ನಷ್ಟೇ ಹತ್ತಿಸಿಕೊಂಡು ತನ್ನನ್ನು ಬಿಟ್ಟು ಹೋದ ಕಂಡಕ್ಟರನನ್ನು ಶಪಿಸಿ, ನನ್ನ ಮನೆಗೆ ಬಂದೆ ಎಂದು ಹೇಳುತ್ತಿದ್ದನೇ ಹೊರತು ಪ್ರಶ್ನೆಗೆ ಉತ್ತರ ಕೊಡುತ್ತಿದಿಲ್ಲ.

ಅನೇಕರು ಏನೂ ಗೊತ್ತಿಲ್ಲದೆ ಗಂಟೆಗಟ್ಟಲೆ ಮಾತನಾಡುತ್ತಾರೆ. ಇನ್ನನೇಕರು ಆಂಗ್ಲ ಭಾಷೆಯಲ್ಲಿ ಹೇಳುವಂತೆ Beat about the bush (ಪೊದೆಯ ಸುತ್ತ ಬಡಿಯುತ್ತಾರೆ) ಆದರೆ ಅವರ ಹೊಡೆತ ಅವಿತಿರುವ ಪ್ರಾಣಿಗೆ ತಾಗದು. ಅಂದರೆ ನೇರ ವಿಷಯಕ್ಕೆ ಅವರು ಬರುವದೇ ಇಲ್ಲ. ಕೆಲವರು ಭಾಷಾವ್ಯಾಮೋಹದಿಂದ ಶಬ್ದಗಳನ್ನು ಬಳಸುತ್ತಲೇ ಹೋಗಿ ವಿಷಯವನ್ನೇ ಹೇಳುವದಿಲ್ಲ ಅಥವಾ ವಿಷಯ ಅವರಿಗೆ ಗೊತ್ತಿರುವದಿಲ್ಲ. ಆದುದರಿಂದ ಕೇಳಿದ ಪ್ರಶ್ನೆಗೆ, ಕೊಟ್ಟ ವಿಷಯಕ್ಕೆ ನ್ಯಾಯವಾಗುವಂತೆ ನಮ್ಮ ಉತ್ತರವಿರಬೇಕಲ್ಲವೇ?

*PAGE DONATED BY : **SHRI V. G. BHAT, NIGDI** (DEC.-2011)*


Sir M. Visvesvaraya Institute
of Management Studies & Research (SVIMS)
AICTE Approved
Applications Invited for 2011-2013 Batch from
Kannada Minority Students
(Konkani, Tulu, Kodava)
Masters in Management Studies (MMS)
AFFILIATED TO UNIVERSITY OF MUMBAI
SCHOLARSHIPS AVAILABLE FOR
MERITORIOUS STUDENTS
DTE CODE : MB 3419
www.svims.com
SVIMS
Please take appintmentand visit our campus
Address: Road No 7A, Sewri-Wadala Estate.
Wadala West, Mumbai-400031
Near VJTI and ICT.
Five mins walk from Kingscircle & Wadala stations
Tel : 24180560 / 61 / 62 / 63 Email : svims3@gmail.com
Creating Leaders for the Millenium

# ಭಾಗವತ ಮಹಾತ್ಮ್ಯೆ

*ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು :* **ಡಾ। ವಸಂತ ಭಾಗವತ ವೀಣೆ**

*( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರು ಓದಿ ಹೇಳಬೇಕಾಗಿ ವಿನಂತಿ. )*

## ಕಾಲಿಯಾ ಮರ್ಧನ

ಒಮ್ಮೆ ಶ್ರೀಕೃಷ್ಣನು ಬಲರಾಮನ ಹೊರತಾಗಿ ಉಳಿದ ಗೋಪಾಲರೊಂದಿಗೆ ಗೋಗಳನ್ನು ಮೇಯಿಸುತ್ತ, ಯಮುನಾನದಿಯಲ್ಲಿ ನೀರು ಕುಡಿಯಲು ಹೋದರು. ಅಲ್ಲಿಯ ಮಡುವಿನಲ್ಲಿ ಕಾಲಿಯಾ ಎಂಬ ಹೆಸರಿನ ಭಯಂಕರ ವಿಷಾದಿ ನಾಗ ಸರ್ಪವು ತನ್ನ ಸ್ತ್ರೀ ಪುತ್ರರೊಂದಿಗೆ ವಾಸಿಸುತ್ತಿತ್ತು. ಅದರಿಂದ ಅಲ್ಲಿಯ ನೀರೆಲ್ಲಾ ವಿಷಮಯವಾಗಿತ್ತು. ಆ ನೀರನ್ನು ಕುಡಿದ ಕೂಡಲೇ ಗೋಗಳು ಹಾಗೂ ಗೋಪಾಲರೆಲ್ಲರೂ ಸತ್ತುಬಿದ್ದರು. ಅದನ್ನು ನೋಡಿ ತ್ರೈಲೋಕ್ಯನಾದ ಶ್ರೀಕೃಷ್ಣನು ತನ್ನ ಅಮೃತಮಯ ದೃಷ್ಟಿಯಿಂದ ಎಲ್ಲರನ್ನೂ ಸಜೀವಗೊಳಿಸಿದನು. ಗೋಪಾಲರು ಎದ್ದ ಕೂಡಲೇ ತಾವು ವಿಷದ ನೀರು ಕುಡಿದು ಸತ್ತಿದ್ದೆವೆಂದೂ ಶ್ರೀಕೃಷ್ಣನ ಕೃಪೆಯಿಂದ ತಾವು ಪುನಃ ಬದುಕಿದೆವೆಂದು ಅವರಿಗೆ ಹೊಳೆಯಿತು.

ಯಮುನೆಯ ನೀರು ದೂಷಿತ ವಿಷಾದಿ ಆದದ್ದನ್ನು ಕಂಡು ಭಗವಂತನು ವಿಚಾರ ಮಾಡಿದನು "ಈ ಕಾಲಿಯಾನನ್ನು ಇಲ್ಲಿಂದ ಹೊರಗೆ ಹಾಕಬೇಕು. ಇಲ್ಲವಾದರೆ ತನ್ನ ಭಕ್ತರಿಗೆ ಉಪದ್ರವವಾಗುತ್ತಿದೆ." ಹೀಗೆ ನಿಶ್ಚಯಿಸಿ, ಮರುದಿನ ಬೆಳಗ್ಗೆ ಎದ್ದು ಯಾರಿಗೂ ಹೇಳಿದೆ. ಕಾಲಿಯಾ ಇದ್ದ  ಮಡುವಿಗೆ ಹೋದನು. ಅಲ್ಲಿ ದಂಡೆಯ ಮೇಲೆ ಒಂದೇ ಒಂದು ಕದಂಬ ವೃಕ್ಷವಿತ್ತು. ಆ ಮಡುವಿನ ವಿಷಜ್ವಾಲೆಯಿಂದ ಅದರ ದಂಡೆಯಲ್ಲಿ  ಗಿಡಗಳು ಬದುಕುತ್ತಿದ್ದಿಲ್ಲ. ಹಕ್ಕಿಗಳೂ ಕೂಡ ಅದರ ಮೇಲೆ ಹಾರಾಡುತ್ತಿರಲಿಲ್ಲ. ಹಿಂದೊಮ್ಮೆ ಗರುಡನು ಅಮೃತವನ್ನು ಒಯ್ಯುವಾಗ ಆ ಗಿಡದ ಮೇಲೆ ಕುಳಿತಿರಲು ಅಮೃತದ ಒಂದು ಹನಿಯು ಬಿದ್ದುದರಿಂದ ಆ ಕದಂಬ ವೃಕ್ಷ ಬದುಕಿ ಉಳಿದಿತ್ತು. ಶ್ರೀಕೃಷ್ಣನು ಕೋಲು ಹಾಗೂ ಕಂಬಳಿಯನ್ನು ದಡದ ಮೇಲೆ ಇಟ್ಟು ಕದಂಬ ವೃಕ್ಷವನ್ನೇರಿ ಅಲ್ಲಿಂದ ಮಡುವಿನಲ್ಲಿ ದುಮುಕಿದನು. ಹಾಗೂ ಮಡುವಿನ ಆಳಕ್ಕೆ ಹೋದನು. ಇಂದು ಈ ಮಡುವಿನಲ್ಲಿ ಯಾರು ಬಂದರೆಂದು ಭಯಂಕರನಾದ ಕಾಲಿಯಾನು ಸಂತಾಪಗೊಂಡು ಘೂತ್ಕಾರ ಮಾಡುತ್ತ ಶ್ರೀಕೃಷ್ಣನ ಮೇಲೆ ಧಾವಿಸಿ ಬಂದನು.

ಈ ಕಾಲಿಯಾನು ಯಮುನಾ ನದಿಯಲ್ಲಿ ಮಡಿಯಲ್ಲಿ ವಾಸಿಸಲು ಒಂದು ಕಾರಣವಿತ್ತು. ಹಿಂದೊಮ್ಮೆ ಕಮಣಕ ದ್ವೀಪದಲ್ಲಿ ಸರ್ವ ನಾಗಗಳು ವಾಸಿಸುತ್ತಿದ್ದವು. ಗರುಡನು ಆಗಾಗ ಬಂದು ತನಗೆ ಬೇಕಾದಷ್ಟು ನಾಗಗಳನ್ನು ಎತ್ತಿಕೊಂಡು ಹೋಗಿ ತಿಂದು ಬಿಡುತ್ತಿದ್ದನು. ಆಗ ನಾಗ ಕುಟುಂಬಗಳಿಗೆ ದುಃಖವಾಯಿತು. ಯಾವ ನಾಗವೂ ಜೀವಿಸುವ ಹಾಗೆ ಇರಲಿಲ್ಲ. ಆಗ ಸರ್ವನಾಗಗಳೂ ಕೂಡಿ ಗರುಡನಿಗೆ 'ಪ್ರತಿ ತಿಂಗಳು ಒಂದು ಬಲಿಯನ್ನು ಕೊಡುವೆವು. ನೀನು ಒಂದರಲ್ಲೇ ಸಂತೃಪ್ತನಾಗಬೇಕು. ಮಧ್ಯದಲ್ಲಿ ಬಂದು ತಿನ್ನಬಾರದು' ಎಂದು ವಿನಂತಿ ಮಾಡಿಕೊಂಡವು. ಇದಕ್ಕೆ ಗರುಡನು ಒಪ್ಪಿ ತಿಂಗಳಿಗೊಮ್ಮೆ ಬಂದು ಒಂದೇ ನಾಗನನ್ನು ತಿನ್ನುತ್ತಿದ್ದನು. ಅದರಿಂದ ಉಳಿದ ನಾಗಗಳು ಅಂಜಿಕೆ ಇಲ್ಲದೆ ಇರಹತ್ತಿದವು. ಒಮ್ಮೆ ಕಾಲಿಯಾನ ಸರತಿ ಬಂದಿತು. ಇವನು ತಪ್ಪಿಸಿದನು. ಗರುಡನು ಕಾಲಿಯಾನನ್ನು ಶೋಧಿಸಿ ತೆಗೆದನು. ಆಗ ಕಾಲಿಯಾ ಗರುಡನನ್ನು ಕಚ್ಚಿದನು. ಆದರೆ ಗರುಡನಿಗೆ ಏನೂ ಅಪಾಯವಾಗಲಿಲ್ಲ. ಅವನು ತನ್ನ ಪಂಖಗಳಿಂದ ಕಾಲಿಯಾನನ್ನು ಹೊಡೆಯಲು ಅವನು ರಕ್ತ ಕಾರುತ್ತ ಓಡಿಹೋಗಿ ಯಮುನೆಯ ಈ ಆಳವಾದ ಮಡುವಿಗೆ ತನ್ನ ಸರ್ವ ಪರಿವಾರದೊಂದಿಗೆ ಬಂದನು. ಇಲ್ಲಿ ಗರುಡನು ಬರಲು ಸಾಧ್ಯವಿಲ್ಲವೆಂದು ಕಾಲಿಯಾನಿಗಷ್ಟೇ ಗೊತ್ತಿತ್ತು. ಯಾಕೆಂದರೆ ಒಮ್ಮೆ ಸಾಭರಿ ಋಷಿಗಳು ಈ ಮಡುವಿನಲ್ಲಿ ಸ್ನಾನ ಸಂಧ್ಯಾವಂದನೆಗಳನ್ನು ಮಾಡುತ್ತಿರುವಾಗ, ಗರುಡನು ಅಲ್ಲಿಗೆ ಬಂದು ಒಂದು ದೊಡ್ಡ ಮೀನನ್ನು ತಿಂದನು. ಆಗ ಆ ಮೀನಿನ ಇತರ ಪರಿವಾರದ ದುಃಖವನ್ನು ಕಂಡು ಸಾಭರಿ ಋಷಿಗೆ ಬಹಳ ಕೆಡಕು ಅನಿಸಿತು. ಆಗ ಅವರು ಗರುಡನಿಗೆ "ನೀನು ಇನ್ನೊಮ್ಮೆ ಇಲ್ಲಿ ಬಂದರೆ ಸತ್ತು ಬೀಳುವೆ" ಎಂದು ಶಾಪ ಕೊಟ್ಟ ಕಾರಣ, ಗರುಡನು ಆ ಮಡುವಿಗೆ ಬರುವ ಹಾಗಿರಲಿಲ್ಲ. ಹಾಗೂ ಕಾಲಿಯಾನು ಅಲ್ಲಿ ನಿರ್ಭೀತಿಯಿಂದ ಇರುತ್ತಿದ್ದನು.

ಕಾಲಿಯಾನು ತನ್ನ ಅನೇಕ ಮುಖಗಳಿಂದ ಶ್ರೀಕೃಷ್ಣನನ್ನು ಕಚ್ಚಿದನು. ಆದರೆ ಭಗವಂತನಿಗೆ ವಿಷ ಏರುವುದೇ? ಅವನು ನಗುತ್ತ ನಿಂತನು. ತನ್ನ ವಿಷದಿಂದ ಈ ಬಾಲಕನು ಸಾಯದೆ ಇದ್ದದ್ದನ್ನು ನೋಡಿ ಕಾಲಿಯಾನಿಗೆ ಪ್ರಥಮ ಬಾರಿ ಆಶ್ಚರ್ಯವಾಯಿತು. ಅವನು ಕ್ರುದ್ಧನಾಗಿ ಶ್ರೀಕೃಷ್ಣನ ಶರೀರದ ಸುತ್ತಲೂ ತನ್ನ ಅಂಗದಿಂದ ಗಟ್ಟಿಯಾಗಿ ಸುತ್ತು ಹಾಕಿದನು.

ಇತ್ತ ಗೋಕುಲದಲ್ಲಿ ಸೂರ್ಯೋದಯವಾಯಿತು. ಕೃಷ್ಣನನ್ನು ಕಾಣದೆ ಎಲ್ಲರೂ ಹುಡುಕೇ ಹುಡುಕಿದರು. ಕೊನೆಗೆ ಕೃಷ್ಣನ ಕಮಲ, ಅಂಕುಶ, ವಜ್ರ, ಧ್ವಜಾದಿ ಚಿಹ್ನೆಗಳುಳ್ಳ ಹೆಜ್ಜೆಗಳನ್ನು ಹಿಡಿದು ಅವರೆಲ್ಲ ಯಮುನಾ ತೀರಕ್ಕೆ ಬಂದರು. ಅಲ್ಲಿ ದಡದಲ್ಲಿ ಶ್ರೀಕೃಷ್ಣನ ಕೈಯೊಳಗಿನ ಕೋಲು, ಹಾಗೆ ಹೆಗಲ ಮೇಲಿನ ಕಂಬಳಿಯನ್ನು ನೋಡಿ, ಕೃಷ್ಣನು ನದಿಯಲ್ಲಿ ಮುಳುಗಿದನೆಂದು ಎಲ್ಲರೂ ಆಕ್ರೋಶ ಮಾಡ ಹತ್ತಿದರು. ಆದರೆ ಬಲರಾಮನಿಗೆ ಮಾತ್ರ ಅಸಮಾಧಾನವಾಗಲಿಲ್ಲ. ಅವನು "ಶ್ರೀಕೃಷ್ಣನು ನೀರಲ್ಲಿ ಮುಳುಗಿ ಸಾಯುವವನಲ್ಲ. ತುಸು ತಾಳಿರಿ ಅವನು ಎಲ್ಲಿಂದಾದರೂ ಬರುವನು. ಅಳಬೇಡಿರಿ" ಎಂದು ಸಮಾಧಾನ ಹೇಳಿದರೂ ಎಲ್ಲ ಗೋಪ-ಗೋಪಿಯರು ಎದೆಬಡಿದುಕೊಳ್ಳುತ್ತ ಅಳಹತ್ತಿದರು. ಯಶೋಧೆಯಂತೂ ಯಮುನೆಯಲ್ಲಿ ಹಾರುವವಳಿದ್ದಳು. ಆಗ ಬಲರಾಮನು ಮಹಾಪ್ರಯಾಸದಿಂದ ಅವಳನ್ನು ತಡೆದನು.

ಇತ್ತ ಕೃಷ್ಣನು ನೀರಿನಲ್ಲಿ ವಿಚಾರ ಮಾಡಿದನು. ಇನ್ನು ತಡ ಮಾಡಿದರೆ ತಾಯಿ ಹಾಗೂ ಇತರರು ಪ್ರಾಣವನ್ನೇ ಕೊಡುವರು ಎಂದು, ತನ್ನ ಮೈಯನ್ನು ಹಿಗ್ಗಿಸಹತ್ತಿದನು. ಅದರಿಂದ ಕಾಲಿಯಾನು ಸತ್ತು ಕಳಚಿ ಬಿದ್ದನು. ಶ್ರೀಕೃಷ್ಣನು ಅವನ ಬಾಲವನ್ನು ಹಿಡಿದು ಅವನ ಹೆಡೆಗಳ ಮೇಲೆ ಕಾಲನ್ನು ತುಳಿದು ಕುಣಿಯ ಹತ್ತಿದನು. ಅವನ ಕಾಲೊಳಗಿನ ಬಂಗಾರದ ಗೆಜ್ಜೆಗಳಿಂದ ಛುಮಂ ಛುಮಂ ಸಪ್ಪಳ ಮಾಡುತ್ತ ಕೃಷ್ಣನು ಶಂಕರನ ತಾಂಡವ ನೃತ್ಯದ ಹಾಗೆ ನೃತ್ಯ ಮಾಡುವುದನ್ನು ಕಂಡು ಸ್ವರ್ಗದಲ್ಲಿಯ ದೇವ ಅಪ್ಸರೆಯರು  ತಮ್ಮ ವಾದ್ಯಗಳಿಂದ ಕೃಷ್ಣನ ನೃತ್ಯಕ್ಕೆ ಧನಿಗೂಡಿಸುತ್ತಿದ್ದರು. ಶ್ರೀಕೃಷ್ಣನ ತುಳಿತದಿಂದ ಕಾಲಿಯಾನ ಎಲ್ಲ ಹೆಡೆಗಳೂ ಮುರಿದು ಅವನು ರಕ್ತ ಕಾರಹತ್ತಿದನು. ನೀರಿನ ಮೇಲೆ ಬಂದ ಕಾಲಿಯಾನ ಹೆಡೆಗಳ ಮೇಲೆ ಕೃಷ್ಣನು ನೃತ್ಯ ಮಾಡುವುದನ್ನು ನೋಡಿ, ದಡದ ಮೇಲೆ ಇದ್ದ ಗೋಪ ಗೋಪಿಯರಿಗೆಲ್ಲರಿಗೂ ಆಶ್ಚರ್ಯ ಹಾಗೂ ಆನಂದವಾಯಿತು.

ಮರಣೋನ್ಮುಖನಾದ ಕಾಲಿಯಾನಿಗೆ ಚರಾಚರ ಭಗವಾನ ಪರಮೇಶ್ವರನ ಸ್ಮರಣೆ ಬಂದಿತು. ಆ ಪುರಾಣ ಪುರುಷ ನಾರಾಯಣನಿಗೆ ಮನಸ್ಸಿನಿಂದ ಶರಣು ಹೋದನು. ತಮ್ಮ ಪತಿ ಸಾಯುತ್ತಿರುವುದನ್ನು ನೋಡಿ ಕಾಲಿಯಾನ ನಾಗಪತ್ನಿಯರು ಗೋಳಿಡಹತ್ತಿದರು ಹಾಗೂ ತಮ್ಮ ಪತಿಯ ಪ್ರಾಣಭಿಕ್ಷೆಯನ್ನು ಬೇಡಹತ್ತಿದರು. ಕಾಲಿಯಾನು "ಹೇ ನಾರಾಯಣಾ ನಿನಗೆ ಶರಣು. ನಮ್ಮದು ಸರ್ಪಜಾತಿಯು ಜನ್ಮತಃ ದುಷ್ಟ ಹಾಗೂ ಉಗ್ರವಿರುತ್ತದೆ. ನಾವು ಸ್ವಭಾವತಃ ದುಷ್ಟರೂ, ತಾಮಸಿಗಳೂ, ಪರಪೀಡಕರು ಆಗಿರುವೆವು. ನೀನೇ ನಮ್ಮನ್ನು ಈ ರೀತಿಯಾಗಿ ಉತ್ಪನ್ನ ಮಾಡಿರುವುದರಿಂದ ನಮ್ಮ ಅಪರಾಧವೇನು? ಈ ಜಗತ್ತಿನಲ್ಲಿ ಪ್ರಾಣಿಗಳಿಗೆ ಜನ್ಮತಃ ಶಾಂತ ಅಥವಾ ಉಗ್ರ ಸ್ವಭಾವವನ್ನು ಕೊಡುವವನು ನೀನೇ ಆಗಿರುವೆ. ಸ್ವಾಮಿಯಾದ  ನೀನು ನನ್ನ ಅಪರಾಧಗಳನ್ನು ಕ್ಷಮಿಸು" ಎಂದು ಕಳಕಳಿಯಿಂದ ಬೇಡಿಕೊಂಡನು. ಆಗ ಶ್ರೀಕೃಷ್ಣನು ಸ್ಮಿತವದನದಿಂದ ಕಾಲಿಯಾ ಈ ಮಾತು ನಿನಗೆ ಶಿಕ್ಷೆಯಾಗುವ ಪೂರ್ವದಲ್ಲಿ ಹೊಳೆದಿರಲಿಲ್ಲ. ಇಲ್ಲಿ ನನ್ನ ಭಕ್ತರು ಇರುತ್ತಾರೆ. ನಿನ್ನಿಂದ ಅವರಿಗೆ ಉಪದ್ರವವಾಗುತ್ತದೆ. ನೀನು ನಿನ್ನ ಸರ್ಪಪರಿವಾರದೊಂದಿಗೆ ಸಮುದ್ರದಲ್ಲಿಯ ರಮಣಕ ದ್ವೀಪಕ್ಕೆ ಹೋಗು. ನಿನ್ನ ಮಸ್ತಕದ ಮೇಲೆ ನನ್ನ ಚರಣಗಳನ್ನು ಇಟ್ಟಿದ್ದರಿಂದ ಗರುಡನು ನಿನ್ನನ್ನು ತಿನ್ನಲಾರನು. ಚಿಂತಿಸಬೇಡ" ಎಂದು ಹೇಳಿದನು. ಆಗ ಕಾಲಿಯಾನು ಆನಂದದಿಂದ ತನ್ನ ಪರಿವಾರದೊಡನೆ ಶ್ರೀಕೃಷ್ಣನನ್ನು ಪೂಜೆ ಮಾಡಿ ಅನೇಕ ರತ್ನಗಳನ್ನು ಅರ್ಪಣೆ ಮಾಡಿ ರಮಣಕ ದ್ವೀಪಕ್ಕೆ ಹೊರಟು ಹೋದನು. ಶ್ರೀಕೃಷ್ಣನು ನೀರಿನಿಂದ ಹೊರಗೆ ಬಂದುದನ್ನು ನೋಡಿ ಯಶೋದಾ ನಂದ ಆದಿ ಎಲ್ಲರಿಗೂ ಆನಂದವಾಯಿತು. ಗೋಪಾಲರು ಶ್ರೀಕೃಷ್ಣನನ್ನು ಹೆಗಲ ಮೇಲೆ ಹೊತ್ತುಕೊಂಡು ಕುಣಿದಾಡಿದರು.

*(ಮುಂದುವರಿಯುವುದು)*

*PAGE DONATED BY :* ***WELL WISHER OF HWT***

# ಭಾಸ ಬೋಧ

**– ಪ್ರೊ। ವಿಷ್ಣು ಜೋಶಿ, ಕುಮಟಾ**



## ಸುಖದ ಸ್ಮರಣೆಯೇ ಸವಿ

**ಅಹಃ ಸಮುತ್ತೀರ್ಯ ನಿಶಾಪ್ರತೀಕ್ಷತೇ।**
**ಶುಭೇ ಪ್ರಭಾತೇ ದಿವಸೋऽನು ಚಿನ್ತ್ಯತೇ॥**
**ಅನಾಗತಾರ್ಥಾನ್ಯಶುಭಾನಿ ಪಶ್ಚತಾಮ್।**
**ಗತಂ ಗತಂ ಕಾಲಮವೇಕ್ಷ್ಯ ನಿವೃತ್ತಿ**

*(ಪ್ರತಿಜ್ಞಾ ಯೌಗಂಧರಾಯಣಮ್)*

ಹಗಲು ಸುರಕ್ಷಿತವಾಗಿ ಕಳೆದು ಹೋದರೂ ಇರುಳು ಹೇಗೋ ಎಂಬ ಚಿಂತೆ ಕಾಡುತ್ತದೆ. ನಿಶ್ಚಿಂತೆಯಿಂದ ರಾತ್ರಿ ಕಳೆದು ಮಂಗಲದ ಮುಂಜಾನೆ ಮೂಡಿದರೂ ಮುಂದೇನು ಅನಿಷ್ಟ ಕಾದಿದೆಯೋ ಎಂಬ ಕಳವಳ ಇದ್ದೇ ಇರುತ್ತದೆ. ಈಗಾಗಲೇ ಅನುಭವಿಸಿದ, ಕಳೆದು ಹೋದ ಸುಖ ಸನ್ನಿವೇಶಗಳನ್ನು ಸ್ಮರಿಸಿ ಕೊಳ್ಳುವ ಮಾತ್ರದಿಂದಲೇ ಮನಸ್ಸಿಗೆ ನೆಮ್ಮದಿ ಆಗುತ್ತದೆ.

ಗತಕಾಲದ ನೆನಪುಗಳು ಮನಸ್ಸಿನ ಮೂಲೆಯಲ್ಲಿ ಕುಳಿತು ಕಾರುಬಾರು ನಡೆಸುತ್ತದೆ. ಹಿಂದೆ ಅನುಭವಿಸಿದ ಸುಖವಾಗಲೀ, ದುಃಖವಾಗಲೀ ಸ್ಮರಣೆ ಮಾತ್ರದಿಂದ ಮನಸ್ಸಿನಲ್ಲಿ ತೇಲಿ ಬರುತ್ತದೆ. ಮನುಷ್ಯರನ್ನು ಭೂತಕಾಲಕ್ಕೆ ಕೊಂಡೊಯ್ಯುತ್ತದೆ. ಕಾಳಿದಾಸ ಕವಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ

**"ಭಾವಸ್ಥಿರಾಣಿ ಜನನಾಂತರ ಸೌಹೃದಾನಿ"**

*(ಅಭಿಜ್ಞಾನ ಶಾಕುಂತಲಮ್)*

ಜನ್ಮ-ಜನ್ಮಾಂತರ ನೆನಪುಗಳು ಮನಸ್ಸಿನಲ್ಲಿ ಮಂದವಾದ ವಾಸನಾರೂಪದಲ್ಲಿ ಇರುತ್ತವೆಯಂತೆ. ಸಂಸ್ಕೃತ ಗದ್ಯ ಸಾಹಿತ್ಯದ ಅನಭಿಷಕ್ತ ಚಕ್ರವರ್ತಿ ಮಹಾಕವಿ ಬಾಣಭಟ್ಟ ತನ್ನ ಆಚಾರ್ಯ ಕೃತಿ "ಕಾದಂಬರಿಯಲ್ಲಿ ಮಹಾಶ್ವೇತಾ ವೃತ್ತಾಂತದಲ್ಲಿ ಕಾಳಿದಾಸ ಕವಿಯ ಉಕ್ತಿಗೆ-ಶಕ್ತಿ ನೀಡಿದ್ದಾನೆ.

**ದುಃಖಾದ್ ಉದ್ವಿಜತೇ ಸರ್ವಃ ಸರ್ವಸ್ಯ ಸುಖಮೀಪ್ಸಿತಮ್**

*(ಮಹಾಭಾರತ 12-139-62)*

ದುಃಖದಿಂದ ಎಲ್ಲರೂ ಉದ್ವೇಗಗೊಳ್ಳುತ್ತಾರೆ. ಸಕಲರಿಗೂ ಸುಖವು ಅಪೇಕ್ಷಿತ. ಭವಿಷ್ಯವು ನಿಗೂಢ ಆಗಿರುವ ಕಾರಣ ಪ್ರತಿ ವ್ಯಕ್ತಿಯ ಮನಸ್ಸು ನಾಳೆ ಏನಾಗಬಹುದು? ಎನ್ನುವ ಕಳವಳದಿಂದ ಕೂಡಿರುತ್ತದೆ. ಭವಿಷ್ಯದ ಸ್ವರೂಪವೇ ಅನಿಶ್ಚಿತತೆ. ಇಷ್ಟ ಪುತ್ರಿಯ ವಿವಾಹವನ್ನು ಹೆತ್ತವರು ನಿಶ್ಚಯಿಸುತ್ತಾರೆ. ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ. ಆದರೂ ಮನಸ್ಸಿನಲ್ಲಿ ಯಾವುದೋ ಕೊರಗು. ಮದುವೆಯ ದಿನ ಏನಾದರೂ ತೊಂದರೆ ಆದರೆ... ಎಂದು ಚಿಂತೆ ಆರಂಭವಾಗುತ್ತದೆ. ಆದರೆ ಭೂತಕಾಲದಲ್ಲಿ ಅನುಭವಿಸಿದ ಸುಖ ಸನ್ನಿವೇಶಗಳು, ಅವುಗಳ ಸ್ಮರಣೆ ಮನಸ್ಸಿನಿಂದ ಮಾಯವಾಗುವುದಿಲ್ಲ. ಅವುಗಳು ನಮ್ಮ "ಫಿಕ್ಸ್‌ಡೆಪೊಸಿಟ್" ಇದ್ದಂತೆ. ಅವುಗಳನ್ನು ಸ್ಮರಿಸಿಕೊಂಡಾಗ ಆ ಘಟನೆಗಳು ಸ್ಮರಣೆ ಮಾತ್ರದಿಂದಲೇ ಪ್ರತ್ಯಕ್ಷವಾಗಿ ಸವಿಯನ್ನು ಹೆಚ್ಚಿಸುತ್ತವೆ. ಯಾವುದೇ ವಸ್ತುವಿನ ಬೆಲೆ ಅವು ಇಲ್ಲದೇ ಇದ್ದಾಗ ತಿಳಿದು ಬರುತ್ತದೆ. ಯೌವನದ ದಿನದಲ್ಲಿ ಅದನ್ನು ಯಾರು ನಿತ್ಯ ಸ್ಮರಿಸುತ್ತಾರೆ? ಆದರೆ ಯೌವನ ಪ್ರೌಢಾವಸ್ಥೆಗಳು ಜಾರಿ ಪಶ್ಚಿಮ ವಯಸ್ಸಿನಲ್ಲಿ ಇದ್ದಾಗ ತಾರುಣ್ಯ ದಿನಗಳ ಸ್ಮರಣೆ ಸವಿ ಎನಿಸೀತು. ಇದನ್ನೇ ಕಾಳಿದಾಸ ಕವಿ ಸ್ನೇಹದ ನೆನಪುಗಳು ಭಾವಸ್ಥಿರ ಎಂದು ಕರೆದದ್ದು.

ಆದ್ದರಿಂದ ನೆನಪುಗಳು ಬೇಕು. ಸವಿಯಲಿಕೆ ಬದುಕು. ನೆನಪು ಅಂದರೆ ಸುಖ ಮಾತ್ರ ಅಲ್ಲ. ಅಲ್ಲಿ ದುಃಖವು ಸುರಳಿ ರೂಪದಲ್ಲಿ ಇರುತ್ತದೆ.

**ಪುತ್ರಶೋಕಂ ನಿರಂತರಮ್ ॥**

ಹೆತ್ತ ಮಕ್ಕಳನ್ನು ಕಳೆದುಕೊಂಡ ದುಃಖವನ್ನು ಮರೆಯಲಾದೀತೆ? ಇಲ್ಲ.

**ಸ್ಮೃತ್ವಾ-ಸ್ಮೃತ್ವಾ ಯಾತಿ ದುಃಖಮ್ ನವತ್ವಮ್।**

*(ಸ್ವಪ್ನವಾಸವ ದತ್ತಮ್)*

ನೆನಪಿಸಿಕೊಂಡಂತೆಲ್ಲ ದುಃಖವು ಹೊಸ ಹೊಸ ರೂಪದಲ್ಲಿ ಬರುತ್ತದೆಯಂತೆ. ಇಂತಹ ಸಂದರ್ಭದಲ್ಲಿ

**ದುಃಖೇ ದುಃಖಾऽಧಿಕಮ್ ಪಶ್ಯೇತ್।**
**ಸುಖೇ ಪಶ್ಯೇತ್ ಸುಖಾಧಿಕಾನ್॥**

*(ಸುಭಾಷಿತ ಸುಧಾನಿಧಿ 1.136.11)*

ದುಃಖದಲ್ಲಿ ನಮಗಿಂತಲೂ ಹೆಚ್ಚು ದುಃಖ ಬಂದವರನ್ನು ನೋಡಿ ನಮ್ಮ ದುಃಖವನ್ನು ಮರೆಯಬೇಕು. ಇನ್ನೂ ಸುಖದಲ್ಲಿ ನಮಗಿಂತಲೂ ಹೆಚ್ಚು ಸುಖ ಬಂದವರನ್ನು ನೋಡಿ ಗರ್ವ ಪಡಬಾರದು. ಇಂತಹ ವಾಕ್ಯಗಳೆಲ್ಲ ಬಾಳಿಗೆ ಬೆಳಕೇ ಸರಿ.

## ಕೊಲೇಜ್

ಯೌವನವೆಂಬ ನೀರಿನಿಂದ ತುಂಬಿರುವ
ಸರಸದ ಅಲೆಗಳು ಕುಣಿಯುವ
ವಿರಸ ವಿಪರ್ಯಾಸದಲಿ ನೋಯುವ
ವಿರಹ ವೇದನೆಯಲಿ ಬೇಯುವ
ನವರಸದಲಿ ಹೊಸತನವನು ಅರಸುವ
ನಿರಸದ ಸಣ್ಣ-ಕಲ್ಲು ದೊಡ್ಡ ಬಂಡೆಗಳಿರುವ
ಬಗೆ ಬಗೆಯ ತಾವರೆಗಳು ಅರಳು
ದುಂಬಿ ಮರಿದುಂಬಿಗಳು ಝೇಂಕರಿಸುವ
ಸುಂದರವಾದ ಕೊಳ

**– ಶಾಂತಾ ಶಾಸ್ತ್ರೀ, ಡೊಂಬಿವಲಿ (ಪೂ)**






PAGE DONATED BY : ***SHRI N. R. HEGDE, DOMBIVLI*** *(DEC.-2011)*

# ಸಂಕ್ಷಿಪ್ತ ಸುದ್ದಿಗಳು

## ಅಪೂರ್ವ ಪ್ರತಿಭೆಯ ದೀಪಾ ಭಾಗ್ವತ್, ಶಿರಸಿ



ದೀಪಾ ಭರತ ನಾಟ್ಯದ 'ದೀಪ' ಎಂಬುದರಲ್ಲಿ ಸಂಶಯವಿಲ್ಲ. ದೀಪಾ ತನ್ನ 4ನೇ ವರ್ಷದಿಂದಲೇ ಎಳೆಯ ಪಾದಗಳಿಗೆ ಗೆಜ್ಜೆ ಕಟ್ಟಿ ತಾಯಿಯಿಂದ ಭರತನಾಟ್ಯ ಅಭ್ಯಾಸ ಆರಂಭಿಸಿದಳು. ತಾಯಿ ಶ್ರೀಮತಿ ಸೀಮಾ ಭಾಗ್ವತ್ ಕರ್ನಾಟಕದ ಖ್ಯಾತ ನೃತ್ಯ ಗುರುಗಳಲ್ಲಿ ಒಬ್ಬರು.

ತಾಯಿ ನೃತ್ಯ ವಿದುಷಿ ಸೀಮಾ ಭಾಗ್ವತರಾದರೆ, ತಂದೆ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಆದರೂ ಖ್ಯಾತ ಮೃದಂಗ ಹಾಗೂ ಮೋರ್ಚಿಂಗ್ ಕಲಾವಿದರಾದ ಶ್ರೀ ಪ್ರದೀಪ ಭಾಗ್ವತ್. ಈ ಕಲಾ ತಪಸ್ವಿ ದಂಪತಿಗಳ ಏಕೈಕ ಪುತ್ರಿ ಕು. ದೀಪಾ ನೃತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡುತ್ತಾ ಸಾಗಿದ್ದಾರೆ.

ದೀಪಾ ಸತತ 5 ವರ್ಷಗಳ ಕಾಲ ನೃತ್ಯಾಭ್ಯಾಸ ಮಾಡಿ 2007ರಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯವರು ನಡೆಸುವ ಭರತನಾಟ್ಯ ಜ್ಯೂನಿಯರ್ ಪರೀಕ್ಷೆಯನ್ನು ಶೇ. 96 ಅಂಗಗಳಿಸಿ ಕರ್ನಾಟಕ **ರಾಜ್ಯಕ್ಕೆ ಪ್ರಥಮ ರ್‍ಯಾಂಕ್** ಗಳಿಸಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಹೆಸರನ್ನು ಕರ್ನಾಟಕದ ನೃತ್ಯ ಕ್ಷೇತ್ರದಲ್ಲಿ ಬೆಳಗಿಸಿದಳು. 2008ರಲ್ಲಿ ಮೈಸೂರಿನ ಜಗಮೋಹನ್ ಕಾಲೇಜ್‌ನಲ್ಲಿ ಗುರುದೇವ ಕಲಾ ಅಕಡೆಮಿವತಿಯಿಂದ ನಡೆದ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಳು. 2009ರಲ್ಲಿ ಕರ್ನಾಟಕ ಸರಕಾರದ ಕನ್ನಡ ಹಾಗೂ ಸಂಸ್ಕೃತಿ ಇಲಾಖೆವತಿಯಿಂದ ನಡೆದ ಬಾಲ ಪ್ರತಿಭೆ ಭರತನಾಟ್ಯ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ, ವಿಭಾಗ ಮಟ್ಟದಲ್ಲಿ ಪ್ರಥಮ, ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಳು. 2010ರಲ್ಲಿ ಕರ್ನಾಟಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯ ಭರತನಾಟ್ಯ ಸ್ಪರ್ಧೆಯನ್ನು ಜಯಿಸಿದಳು.

2010ರ ಮೇ ತಿಂಗಳಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯವರು ನಡೆಸಿದ ಭರತನಾಟ್ಯ ''ಸೀನಿಯರ್'' ಪರೀಕ್ಷೆಯಲ್ಲಿ ಶೇ. 98 ಅಂಕ ಗಳಿಸಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಗಳಿಸಿ ಜೂನಿಯರ್ ಹಂತದಲ್ಲಿ ಮಾಡಿದ ಸಾಧನೆಯನ್ನು ಪುನರಾವರ್ತಿಸಿದಳು. 2009ರಲ್ಲಿ ಭರತ ನಾಟ್ಯಕ್ಕೆ ಪೂರಕವಾಗಿರುವ ಕರ್ನಾಟಕೀಯ ಸಂಗೀತವನ್ನೂ ಕು. ದೀಪಾ ಅಭ್ಯಾಸ ಮಾಡಿ ಸಂಗೀತದ ಜೂನಿಯರ್ ಗ್ರೇಡ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಈಗ ಸೀನಿಯರ್ ಅಭ್ಯಸಿಸುತ್ತಿದ್ದಾಳೆ. ನೃತ್ಯಕ್ಕೆ ನಟುವಾಂಗ ಮಾಡುವ ಕಲೆಯನ್ನು ಮೈಸೂರಿನ ಮೃದಂಗ ವಿದ್ವಾಂಸಕರಾದ (ಹಿಂದೆ ಅರಮನೆಯ ಆಸ್ಥಾನ ಕಲವಿದರಾಗಿದ್ದ) ಶ್ರೀ ನಾಗಭೂಷಣಾಚಾರ್ ಇವರಲ್ಲಿ ಅಭ್ಯಸಿಸುತ್ತಿದ್ದಾಳೆ.

ಈ ಎಲ್ಲ ಸಾಧನೆಗೆ ಅನೇಕ ಸಂಘ ಸಂಸ್ಥೆಗಳು ಕುಮಾರಿ ದೀಪಾಳನ್ನು ಪುರಸ್ಕರಿಸಿದ್ದಾರೆ, ಸನ್ಮಾನಿಸಿದ್ದಾರೆ. ಮುಖ್ಯವಾಗಿ ಹೆಜ್ಜೆ, ಗೆಜ್ಜೆ, ಹಾನ್‌ಗಲ್, ಮಾರಿಕಾಂಬಾ ನೃತ್ಯ ಶಾಲೆ ಭಟ್ಕಳ, ಆಯುರ್ವೇದ ಅಕಾಡೆಮಿ ಬೆಂಗಳೂರು, ಹಾನಗಲ್ ಮ್ಯೂಸಿಕ್ ಅಕಾಡೆಮಿ ಹುಬ್ಬಳ್ಳಿ, ಲಯನ್ಸ್ ಎಜುಕೇಶನ್ ಸೊಸೈಟಿ ಶಿರಸಿ, ರೋಟರಿ ಸಂಸ್ಥೆ ಶಿರಸಿ, ಹೀಗೆ ಹಲವಾರು ಸಂಸ್ಥೆಗಳು ಕು. ದೀಪಾಳನ್ನು ಗೌರವಿಸಿ ಪ್ರೋತ್ಸಾಹಿಸಿದ್ದಾರೆ. ತಾ. 12.3.2011ರಂದು ಶಿರಸಿಯಲ್ಲಿ ನಡೆದ ಬೆಂಗಳೂರು ಹವ್ಯಕ ಮಹಾಸಭೆಯ ಸಮಾರಂಭದಲ್ಲಿ ಕು. ದೀಪಾಳನ್ನು ಪುರಸ್ಕರಿಸಿದೆ.

ಕು. ದೀಪಾಳ ಸಾಧನೆಗೆ ಕೇಂದ್ರ ಸರಕಾರದ ಸಿ.ಸಿ.ಆರ್.ಟಿ. ಸ್ಕಾಲರ್‌ಶಿಪ್ ಸಿಕ್ಕಿದೆ. 2010ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ಕು. ದೀಪಾಳನ್ನು ಗುರುತಿಸಿ ನೃತ್ಯೋತ್ಸವದಲ್ಲಿ ಅವಕಾಶ ನೀಡಿ ಗೌರವಿಸಿದೆ. ನೃತ್ಯವನ್ನು ತಾಯಿ ಹಾಗೂ ಗುರು ಶ್ರೀಮತಿ ಸೀಮಾ ಭಾಗ್ವತರಲ್ಲಿ ಹಾಗೂ ಸಂಗೀತವನ್ನು ಬೆಂಗಳೂರಿನ ಸಂಗೀತ ವಿದ್ವಾನ್ ರಮೇಶ್ ಚಡಗಾ ಮತ್ತು ನಟುವಾಂಗವನ್ನು (ತಾಳ) ಮೈಸೂರಿನ ವಿದ್ವಾನ್ ನಾಗಭೂಷಣಾಚಾರ್ ಅವರಲ್ಲಿ ಅಭ್ಯಾಸ ಮಾಡುತ್ತಾ ಮುಂಬರುವ ದಿನಗಳಲ್ಲಿ ಪರಿಪೂರ್ಣ ಭರತನಾಟ್ಯ ಕಲಾವಿದೆಯಾಗಲು ಸಜ್ಜಾಗುತ್ತಿದ್ದಾಳೆ.

## ಎಚ್.ಬಿ.ಎಲ್.ರಾವ್‌ರಿಗೆ ಕಿರಿಕ್ಕಾಡು ಪ್ರಶಸ್ತಿ

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಸಂಘದ ವತಿಯಿಂದ ಕಿರಿಕ್ಕಾಡು ವಿಷ್ಣು ಭಟ್‌ರ ಸ್ಮರಣಾರ್ಥವಾಗಿ ನೀಡಲ್ಪಡುವ 2011ರ ಸಾಲಿನ ಕಿರಿಕ್ಕಾಡು ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಎಚ್.ಬಿ.ಎಲ್.ರಾವ್‌ರಿಗೆ ನೀಡಿ ಗೌರವಿಸಲಾಯಿತು. ತಾ. 7.5.2011ರಂದು ಕಾಸಗೋಡಿನ ದೇಲಂಪಾಡಿಯಲ್ಲಿ ನಡೆದ ಸಮಾರಂಭದಲ್ಲಿ ಅತಿಥಿ ಗಣ್ಯರ ಸಮ್ಮುಖದಲ್ಲಿ ಅವರಿಗೆ 'ಕಿರಿಕ್ಕಾಡು' ಪ್ರಶಸ್ತಿಯನ್ನು ಪ್ರದಾನಿಸಲಾಯಿತು. ಯಕ್ಷಗಾನ ಕಲಾವಿದರಾಗಿ, ಅರ್ಥದಾರಿಯಾಗಿ, ಪೋಷಕರಾಗಿ, ಸಂಘಟಕರಾಗಿ ಪದವೀಧರ ಯಕ್ಷಗಾನ ಸಮಿತಿಯ ಅಧ್ಯಕ್ಷರಾಗಿ ಅವರು ಯಕ್ಷಗಾನ ಕ್ಷೇತ್ರದಲ್ಲಿ ಅನನ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಅವರಿಗೆ ಅಭಿನಂದನೆಗಳು.

## ಮಹಾರಾಷ್ಟ್ರ ರಾಜ್ಯ ಕನ್ನಡಿಗರ ನಾಲ್ಕನೇಯ ಸಾಹಿತ್ಯ ಸಾಂಸ್ಕೃತಿಕ ಸಮಾವೇಶ-2011 ( ತಾ. 10,11 ಮತ್ತು 12 ಜೂನ್ 2011 )

ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ಪ್ರಾಯೋಜಕತ್ವದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಕರ್ನಾಟಕ ಸಂಘ ಮುಂಬೈ ಹಾಗೂ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಕಾರದೊಂದಿಗೆ ಕರ್ನಾಟಕ ಸಂಘ ಮಾತುಂಗಾದ ಸಮರಸ ಭವನದಲ್ಲಿ ಜರುಗಲಿದೆ. ಖ್ಯಾತ ಸಾಹಿತಿ ಡಾ. ಕೆ. ರಘುನಾಥರವರ ಅಧ್ಯಕ್ಷತೆಯಲ್ಲಿ ಜರುಗಲಿರುವ ಈ ಸಮಾರಂಭದಲ್ಲಿ ವಿವಿಧ ಉಪನ್ಯಾಸಿಗಳನ್ನು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಕವಿಗೋಷ್ಠಿಯನ್ನು ಆಯೋಜಿಸಲಾಗಿದೆ. 'ಮಂಕುತಿಮ್ಮನ ಕಗ್ಗ'ದ ಜಾದೂ ಪ್ರದರ್ಶನ ಕೂಡ ಈ ಸಮಾರಂಭದ ಆಕರ್ಷಣೆಗಳಲ್ಲೊಂದು. ಎಲ್ಲರಿಗೂ ಆದರದ ಸ್ವಾಗತವನ್ನು ಕೋರಲಾಗಿದೆ.

## ಭರತಕುಮಾರ್ ಪೊಲಿಪುರವರಿಗೆ ಡಾಕ್ಟರೇಟ್

ಕರ್ನಾಟಕ ಸಂಘ ಮುಂಬಯಿ ಇದರ ಗೌರವ ಪ್ರಧಾನ ಕಾರ್ಯದರ್ಶಿ, ರಂಗಕರ್ಮಿ ಭರತ್‌ಕುಮಾರ್ ಪೊಲಿಪುರವರಿಗೆ ಅವರು ಸಲ್ಲಿಸಿದ 'ಕನ್ನಡ ರಂಗಭೂಮಿ ಒಂದು ತೌಲನಿಕ ಅಧ್ಯಯನ' ಎನ್ನುವ ಮಹಾಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರೇಟ್‌ನ್ನು ನೀಡಿದೆ. ಸದಾ ಕ್ರಿಯಾಶೀಲರಾಗಿದ್ದು, ನಟ, ದಿಗ್ದರ್ಶಕ, ಸಂಘಟಕ ಹೀಗೆ ವಿವಿಧ ರಂಗದಲ್ಲಿ ಮುಂಬಯಿ ರಂಗಭೂಮಿಗೆ ಅಪಾರವಾದ ಕೊಡುಗೆಯನ್ನು ನೀಡಿದ ಪೊಲಿಪುರವರಿಗೆ ರಂಗಭೂಮಿಯ ವಿಷಯದ ಬಗ್ಗೆ ನಡೆಸಿದ ಸಂಶೋಧನೆಗೆ ಡಾಕ್ಟರೇಟ್ ಸಿಕ್ಕಿದ್ದು ವಿಶೇಷವಾಗಿದೆ. ಅವರಿಗೆ ನಮ್ಮ ಅಭಿನಂದನೆಗಳು.

## GOUSHALA AT KOLAD

Shri Ramachandrapura Math is known for its commitment to the noble cause of saving, caring and propagating Indian breeds of cattle. Under this mission, Goushalas have been built under the guidance of Shree Shree Raghaveshwara Bharathi Mahaswamiji at Kolad, Raigad District, Maharashtra. The objective of this Goushala is to protect, preserve and conserve breeds of cows which are of Maharashtra origin. Mr. Krishna S. Bhat had committed to donate approx. 40 acres of land to Ramachandrapura Math in 2005 to carry forward the noble cause. We are happy to announce that Shri Krishna S. Bhat has, with the help of Shri Prakash Bhat and other Goubhakts fulfilled the promise by donating 40 acres of land worth Rs.6 crores (as per the government valuation) and incurring the stamp duty of Rs 37 lacks. The land is now registered in the name of the Trust named "Maa Rashtra Pratisthan" (MRP). MRP is registered under Public Trust with Charity Commissioner, Mumbai.

*Report : Usha Bhat*

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2009)*

'Havyaka Sandesha', June 2011

RNI NO. MAHBIL / 2000 / 746,
Post al R.NO. L / TECH - 47 / 989 / MBI / 2009 - 11

WPP Licence No. MR/Tech WPP - 188 / North / 09-11 Posted at Mumbai Patrika Channel Stg. Office Mumbai-400 001.

Date of Posting :
27, 28th of every previous month

If undelivered, please return to :
HAVYAKA WELFARE TRUST
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
E-mail : havyakamumbai@hotmail.com
Visit : www.havyakamumbai.com

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

REGISTERED NEWSPAPER

To,

# INDIAN MEDIA INDUSTRY : CHANGING LANES

**Kartik Bhat**

2011 is here and we are into a new decade. As we enter a new decade it would be worthwhile to look back at the key developments in the Indian media industry in the last decade and assess the impact that it has had on our society. The media industry comprises television media, print media (newspapers and magazines), radio, internet, etc. Out of these, radio is the most popular medium of news and entertainment for the Indian people, especially the masses. However television media and print media have been more predominant in terms of creating an impact on society and have witnessed a lot of developments in the last few years. Therefore this article will be focused on these two media.

TV had a penetration of 61% in early 2010. Within television, pay TV had 78% penetration, which implies that out of 100 households owning a TV set, 78 households have a pay TV set. Newspaper readership in India is estimated to be around 250 million. Now let us look at the impact that these media have created on our society in the last few years.

First and foremost the television media has been instrumental in bringing about an attitudinal change in India. Careers in sectors like BPOs, hotel management, fashion designing, etc. had few takers a decade ago. Today however the attitudes and perceptions of youth has undergone a change and these professions are also being pursued in large numbers. Secondly the Indian woman has become more independent and we find many women in our society who are the bread winners for their family. Television media has had a significant role to play in this transformation. There has been a 5% incremental growth in the number of working women in urban India in the last decade.

The media has also played a significant role in exposing scams involving corrupt politicians and has ensured that the rich and influential don't walk away in spite of committing heinous crimes. We have seen a number of scams in the last few years. In each of these, the media has given us a comprehensive 24x7 coverage and has broadcasted every facet of the story as it unfolded, in an unbiased manner. However the profound and incisive probe conducted by the media in exposing the guilty in the recent Adarsh Society scam & the 2G spectrum scam is truly laudable and one has to say that the media industry has evolved from where it was a few years back. A decade ago, not many would have imagined the media playing the role of a powerful watchdog and keeping a close watch on corrupt politicians and bureaucrats.

Talking about 24x7 media coverage, the visit by the US President last year comes to mind. Pictures of the Obama couple dancing with school kids grabbed front page space, though it was of little relevance in the context of the business objective of their visit. All the newspapers also gave ample print space to the $ 15 billion deals signed by the US President. Leading newspapers reported the $750 million deal with GE and Reliance Power. However there was a near simultaneous $8.3 billion deal signed by Reliance Power with Shanghai Electric, which dwarfed the deal value with GE. Obviously, one wouldn't have expected this to be reported in the next couple of days while the US President was here but surprisingly this wasn't reported by any of the newspapers in the next 6 weeks or so. This interesting bit of information was mentioned in an article on Indo-Chinese bilateral trade by a columnist in a financial daily, about 6 weeks later. While this is one example that comes to mind, there have been many such instances wherein newspapers only report the mere happenings of previous day, but fail to provide a holistic perspective on a particular event, something which passionate readers expect. Very few newspapers do the same, in my mind.

The media has often been accused of sensationalizing certain things which might seem less pertinent on a particular day. While this is understandable in the context of all channels striving to garner TRPs at the expense of rival channels, what is disturbing is the negative mindset of the media. Every other day we watch certain news channels flashing a scam, murder, rape, etc. as Breaking News and creating a hype out of it. Similarly the front page space in newspapers carries reports on rising inflation, corruption or other crime reports, more often. Such news articles are disturbing and are causes of concern for the common man.

On the other hand, how many times have we read about unique feats, medical accomplishments, achievements by sportsmen (other than cricketers) on the front page? Reports that bring cheer and delight to the readers' minds. A couple of months ago, there was an article on a Dhule-based doctor removing 1.7 lakh stones from a patient's kidney and entering Guinness World Records. But instead of reporting this encouraging news article on first page, this was buried in the third or fourth page of the newspaper. Similarly there was a recent article on online voting from 2012 which again did not feature on first page. Such articles instil positive attitude in the readers' minds and hence the need to report them on the front page. The question that needs to be raised here is, Is the Indian media being negative and is sensationalizing every crime, scam, tragic event or do we Indians have a mindset which is more receptive to tragic and concerning news/ events and therefore the media is only feeding us with the same to gain TRPs.

This decade, the Indian media landscape will be characterized by the growing influence of digital media, DTH making further inroads in cities, onset of internet revolution in semi-urban areas. Also TV and print media will continue to launch innovative content in order to be perceived as different from the rest in the audiences' minds. But the audiences' response to the new content being launched will be interesting. It will be interesting to see if the Indian public non-chalantly views newspapers / TV channels as a means to kill time in buses/ trains/ in living rooms or do they make a conscious endeavour to differentiate between the positive and negative influences of the media; thereby conveying a message that newspapers/ TV channels portraying a pessimistic outlook will not be tolerated. I have a feeling that the common man will become more wiser and will choose the latter option in the days to come. Wait and watch! ●

*PAGE DONATED BY : **SHRI VIVEK BHAGWAT,** MULUND (DEC.-2010)*